# ಒಳಸುರಿ ಕಡತವು ಕೇಸರೀಕರಣ, ಅಸಮಾನತೆ ಹಾಗು ಖಾಸಗೀಕರಣದ ಬಗ್ಗೆ ಹೇಳುವುದೇನು? ಕಾಳಜಿಗೆ ಕಾರಣವಾಗುವ ಭಾಗಗಳ ಪರೀಕ್ಷೆ

**ಅಮ್ಮನ್ ಮದನ್**

ಯಾವುದೇ ನೀತಿ ಕಡತವನ್ನು ಓದಿಕೊಂಡು ವಿಶ್ಲೇಷಿಸುವಲ್ಲಿ ಎದುರಾಗಬಹುದಾದ ಕ್ರಮಾನುಸರಣೆಯ ಸಮಸ್ಯೆಗಳನ್ನು ಗುರುತಿಸುತ್ತಾ "ಒಳಸುರಿ ಕಡತ"ದ (Inputs document) ಬಗ್ಗೆ ಚರ್ಚೆಯನ್ನು ಉಪಕ್ರಮಿಸುವುದು ಸೂಕ್ತಕ್ರಮವಾಗಬಹುದು. ನೀತಿ ಕಡತಗಳಲ್ಲಿ ಯಾವುದೇ ಸ್ಪಷ್ಟವೂ, ನಿಸ್ಸಂದಿಗ್ಧವೂ ಆದ ಸಂದೇಶಗಳು ಇರಲಾರದು ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಬೇರೆ ಪಠ್ಯಗಳಂತೆ ಇವುಗಳನ್ನು ಕೂಡ ಅನೇಕ ವಿಭಿನ್ನ ರೀತಿಗಳಲ್ಲಿ ಗ್ರಹಿಸಬಹುದಾಗಿದೆ. ಅವುಗಳು ಸಾಮಾನ್ಯವಾಗಿ ಪದೇಪದೇ ಎದುರಾಗುವ ಹಲವು ವಿರುದ್ಧಾತ್ಮಕ ಧ್ವನಿಗಳ ಗೋಜಲಾಗಿರಲು ಸಾಧ್ಯ. ಕೆಲವೊಮ್ಮೆ ನಿರ್ದಿಷ್ಟ ವಿಷಯಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡುವ ಹಾಗು ಅವುಗಳು ಬಹುವಿಧ ವ್ಯಾಖ್ಯಾನಗಳಿಗೆ ತೆರೆದುಕೊಳ್ಳುವ ಸಾಧ್ಯತೆಗಳೂ ಇರುತ್ತವೆ. ಕಡತವೊಂದು ವಿವಿಧ ಮೂಲಗಳಿಂದ ಸಹಕಾರ ಹಾಗು ಸಲಹೆಗಳನ್ನು ಸ್ವೀಕರಿಸುವ ಪ್ರಕ್ರಿಯೆಯ ಫಲವಾಗಿದ್ದಲ್ಲಿ, ಅದರಲ್ಲಿ ಹೆಣಗಾಟ ಹಾಗು ಹೊಂದಾಣಿಕೆಗಳ ಅನೇಕ ಧ್ವನಿಗಳು ಮಿಳಿತವಾಗಿರುವುದು ಕೊಂಚ ಮಟ್ಟಿಗೆ ಅನಿವಾರ್ಯವೇ ಹೌದು. ನೀತಿ ಕಡತಗಳನ್ನು ವ್ಯಾಖ್ಯಾನಿಸಲು ಕೆಲವು ನಿರ್ದಿಷ್ಟ ನಿರೂಪಣಾ ವಿಷಯಗಳನ್ನು ನೋಡಲು ಮಾತ್ರ ತೊಡಗಬಹುದಲ್ಲದೇ, ಅವುಗಳನ್ನು ಸಂಭಾಳಿಸುವ ಏಕಮಾತ್ರ ರೀತಿಯ ಬದಲಿಗೆ ವಿವಿಧ ರೀತಿಗಳನ್ನು ನೋಡುವ ಪ್ರಯತ್ನವನ್ನೂ ಮಾಡಬೇಕಾಗುವುದು. ಅವುಗಳಲ್ಲಿ ಏನನ್ನು ಹೇಳಲಾಗಿದೆ, ಅವುಗಳಲ್ಲಿನ ವಿವಿಧ ಧ್ವನಿಗಳ ಉಪಸ್ಥಿತಿಯನ್ನು ಗಮನಿಸುವುದರ ಜೊತೆಗೆ ಅವು ಯಾವ ಸಂಗತಿಗಳ ಬಗ್ಗೆ ಮೌನವಾಗಿದೆ ಎಂದೂ ಗಮನಿಸಿ, ಈ ಮೌನವು ಆಕಸ್ಮಿಕವೋ ಅಥವಾ ಮಹತ್ತ್ವದ್ದೋ ಎಂದು ಸಂದೇಹಕ್ಕೊಳಗಾಗಬಹುದು. ಇಂತಹ ಕಡತಗಳನ್ನು ಪುನರ್ ಪರಿಶೀಲಿಸುವಾಗ ಅವುಗಳನ್ನು ಯಾವ ರೀತಿಗಳಲ್ಲಿ ಜನ ಬಳಸಬಹುದು ಎಂಬುದನ್ನು ಮನಸ್ಸಿನಲ್ಲಿ ಇರಿಸಿಕೊಳ್ಳುವುದು ಮುಖ್ಯವಾಗುತ್ತದೆ. ಭವಿಷ್ಯದಲ್ಲಿ ಜನ ತಮ್ಮದೇ ಕಾರ್ಯಸೂಚಿಯ ಬೆಂಬಲಕ್ಕಾಗಿ ನೀತಿ ಕಡತವನ್ನು ಬಳಸುವ ಸಾಧ್ಯತೆಗಳಿದ್ದು, ಯಾವುದು ತಮ್ಮ ಕಾರ್ಯಸೂಚಿಯನ್ನು ನಿಶ್ಚಯವಾಗಿಯೂ ಬೆಂಬಲಿಸುವುದೋ ಅದನ್ನು ಮಾತ್ರ ಉಲ್ಲೇಖಿಸಿ ಉಳಿದದ್ದನ್ನು ನಿರ್ಲಕ್ಷ್ಯ ಮಾಡುವ ಸಾಧ್ಯತೆಗಳಿರುತ್ತವೆ. ಹಿಂದುತ್ವವಾದಿಗಳು ಮತ್ತು ಜಾತ್ಯತೀತವಾದಿಗಳು, ಖಾಸಗೀಕರಣದ ಪ್ರತಿಪಾದಕರು ಹಾಗು ಶಿಕ್ಷಣಕ್ಷೇತ್ರಕ್ಕೆ ಸರ್ಕಾರದ ಬೆಂಬಲವನ್ನು ಪುನಃ ಸ್ಥಾಪಿಸಲು ಬಯಸುವವರನ್ನು ಮೊದಲ್ಗೊಂಡು ಎಲ್ಲರೂ ತಮ್ಮ ವಿಭಿನ್ನ ಸಲಹೆ, ಶಿಫಾರಸುಗಳನ್ನು ಅದೇ ಕಡತದಿಂದ ಹೊರಡಿಸಲು ತವಕಿಸುತ್ತಾರೆ. ಆದ್ದರಿಂದ, ನೀತಿ ಕಡತಗಳನ್ನು ವ್ಯಾಖ್ಯಾನಿಸುವಲ್ಲಿ ಅವುಗಳಿಂದ ಏಕೈಕ ಸಾರಭೂತ ಸಂದೇಶವನ್ನು ಹೊರಡಿಸುವ ಯತ್ನದಿಂದ ನಮ್ಮನ್ನು ಬಿಡಿಸಿಕೊಳ್ಳುವುದು ಉಚಿತವಾಗುತ್ತದೆ. ಬದಲಿಗೆ ಅವುಗಳನ್ನು ಅವುಗಳ ಸಂಕೀರ್ಣತೆಯಲ್ಲಿ, ಅವುಗಳ ವಿಭಿನ್ನ ಹಾಗು ಅನೇಕ ಧ್ವನಿಗಳಲ್ಲಿ ಅವಲೋಕಿಸುವುದು ಉತ್ತಮ. ಈ ರೀತಿ ಅವಗಾಹಿಸಿದರೆ ಅಂತಹ ಕಡತವನ್ನು ಅಂತಿಮವಾಗಿ ಯಾವ ರೀತಿಗಳಲ್ಲಿ ಬಳಸಿಕೊಳ್ಳಬಹುದು ಎಂಬುದನ್ನು ಕಂಡುಕೊಳ್ಳಲು ಸಹಾಯವಾಗುತ್ತದೆ.

ಒಳಸುರಿ ಕಡತವು ಎತ್ತಿಕೊಳ್ಳುವ ಅನೇಕ ವಿಚಾರಗಳು ಹಾಗು ಸಮಸ್ಯೆಗಳಲ್ಲಿ ನಾನು ಕೇವಲ ಮೂರರ ಬಗ್ಗೆ ಮಾತ್ರ ಇಲ್ಲಿ ನನ್ನ ಗಮನವನ್ನು ಕೇಂದ್ರೀಕರಿಸಲು ಬಯಸುತ್ತೇನೆ: ಮೊದಲಿಗೆ, ಶಿಕ್ಷಣದ ಕೇಸರೀಕರಣ (saffronisation of education), ಎರಡನೆಯದು, ಹೆಚ್ಚಿನ ಸಾಮಾಜಿಕ ಸಮಾನತೆಯ ಸಮರ್ಥನೆ (promotion of greater social equality) ಹಾಗು ಕಡೆಯದಾಗಿ, ಶಿಕ್ಷಣದ ಖಾಸಗೀಕರಣ (privatisation of education). ರಾಷ್ಟ್ರೀಯ ಶಿಕ್ಷಣನೀತಿಯು ಸಾಗಲಿರುವ ದೆಸೆಯನ್ನು ಕಂಡು ಈ ವಿಷಯಗಳ ಬಗ್ಗೆ ಬಹಳಷ್ಟು ಜನ ತಮ್ಮ ಆಸಕ್ತಿ ಹಾಗು ಕಳವಳಗಳನ್ನು ವ್ಯಕ್ತಪಡಿಸಿದ್ದಾರೆ. ಇವು ನಾನು ಕೂಡ ಬಹುಕಾಲದಿಂದ ಆಸಕ್ತನಾಗಿರುವ ವಿಷಯಗಳೇ ಆಗಿವೆ.

**ಕೇಸರೀಕರಣ**

ಒಳಸುರಿ ಕಡತವು ಬಿಡುಗಡೆಯಾದಾಗ ನಮ್ಮಲ್ಲಿ ಅನೇಕರ ಮನಸ್ಸಿನಲ್ಲಿ ಬಂದ ಮೊದಲ ಪ್ರಶ್ನೆಯೆಂದರೆ ಅಲ್ಲಿನ ಕೆಲವು

ಶಿಫಾರಸುಗಳಿಗೆ ಪ್ರಬಲ ಹಿಂದುತ್ವವಾದದ ಒತ್ತು ನೀಡಲಾಗುತ್ತದೆಯೇ ಎಂಬುದಾಗಿದೆ. ಇಡೀ ಸಮಿತಿಯು ಕೇವಲ ಓರ್ವ ವಿದ್ವಾಂಸ ಹಾಗು ಶಿಕ್ಷಣತಜ್ಞರನ್ನು ಒಳಗೊಂಡಿದ್ದುದು ಈ ಆತಂಕಕ್ಕೆ ವಿಶೇಷವಾದ ಕಾರಣವಾಗಿತ್ತು. ಆದ್ದರಿಂದ, ಇದರಲ್ಲಿ ಯಾವುದೇ ತೀಕ್ಷ್ಣರೂಪದ ಹಿಂದುತ್ವದ ಶ್ರೇಷ್ಠತೆಯ ಪ್ರತಿಪಾದನೆಯಾಗಲೀ, ಇತರ ಅಲ್ಪಸಂಖ್ಯಾತರ ತುಚ್ಚೀಕರಣವಾಗಲೀ ಕಾಣದೇ ಇರುವುದರಿಂದ ನಿರಾಳವಾಗಿದೆ ಎನ್ನಬಹುದು. ಕಡತದ ಬಹುಭಾಗದಲ್ಲಿ ಬಳಸಲಾದ ಭಾಷೆಯು ಈವರೆಗೆ ಕಾಂಗ್ರೆಸ್ ಪೋಷಿತ ಕಡತಗಳು ಭಾರತೀಯ ಶಿಕ್ಷಣ ರಂಗದಲ್ಲಿ ಸಂಸ್ಕೃತಿಯ ಪಾತ್ರವನ್ನು ಬಣ್ಣಿಸುತ್ತಿದ್ದ ಭಾಷೆಯನ್ನೇ ನೆನಪಿಗೆ ತರುವಂತಿದೆ. ವೈವಿಧ್ಯವನ್ನು ಗೌರವದಿಂದ ಕಾಣಲು ಹಾಗು ಸಹಿಷ್ಣುತೆಯನ್ನು ಪ್ರೋತ್ಸಾಹಿಸಲು ಕಲಿಯುವುದು ಎಷ್ಟು ಮುಖ್ಯ ಎಂಬುದು ಕಡತದಲ್ಲಿ ಮತ್ತೆಮತ್ತೆ ಉಲ್ಲೇಖವಾಗಿದೆ (ಉದಾ. ಪು. ೧೪, ೩೦). ವಿದ್ಯಾರ್ಥಿಗಳು ತಮ್ಮ ದೇಶ ಹಾಗು ಪರಂಪರೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಲು ಕಲಿಯುವುದು ಹೇಗೆ ಎಂಬ ಎಳೆಯೂ ಮಿಳಿತವಾಗಿದೆ. ಆದರೆ, ಯುವಜನತೆಯು ದೇಶದ ಬಗ್ಗೆ ಹೆಮ್ಮೆ ತಾಳುವಂತೆ ಬಯಸುವುದರಲ್ಲಿ ಅಚ್ಚರಿಯಾದರೂ ಏನಿದೆ ? ಈ ಎಳೆಯು ಸ್ವಾತಂತ್ರ್ಯ ಬಂದಾಗಿನಿಂದಲೂ ವಿವಿಧ ಶಿಕ್ಷಣ ಸಂಬಂಧಿತ ವರದಿಗಳಲ್ಲಿ ಹಾಗು ನೀತಿ ಕಡತಗಳಲ್ಲಿ ಇರುವುದೇ ಆಗಿದೆ.

ಈ ವಿಚಾರವಾಗಿ ಕಡತದಲ್ಲಿ ಒಂದೆರಡು ಸಣ್ಣ ಕೊರತೆಗಳಿವೆ ನಿಜ, ಆದರೆ, ಇವು ಕಾಂಗ್ರೆಸ್ ಕಾಲದಲ್ಲಿಯೂ ಸಾಮಾನ್ಯವಾಗಿದ್ದುದರಿಂದ, ಇದರ ಅರ್ಥ ತಿಳಿಯದೇ ಹೋಗುತ್ತದೆ. ಉದಾಹರಣೆಗೆ, ಭಾರತದಲ್ಲಿ ಶಿಕ್ಷಣವು ಬೆಳೆದು ಬಂದ ಸಂಕ್ಷಿಪ್ತ ಕಥಾನಕವು ಇಪ್ಪತ್ತನೇ ಶತಮಾನದ ಆರಂಭದ ಐತಿಹಾಸಿಕ ದಾಖಲೆಗಳ ಆಧಾರಕ್ರಮವನ್ನೇ ಅನುಸರಿಸುವಂತೆ ತೋರುತ್ತದೆ. ಈ ಗ್ರಹಿಕೆಯ ಐತಿಹಾಸಿಕ ಘಟನೆಗಳ ಕ್ರಮಬದ್ಧ ಪ್ರಸ್ತುತಿಯು ವೈದಿಕ ಹಾಗು ಬ್ರಾಹ್ಮಣ ಪರಂಪರೆಯಲ್ಲಿ ಮಾತ್ರ ಮಹಾನ್ ಐತಿಹಾಸಿಕ ಸಾಧನೆಗಳಾಗಿವೆ ಎಂಬುದಾಗಿದೆ. ಈ ಕಥಾನಕವು ವೇದಗಳಿಂದ ಮೊದಲ್ಗೊಂಡು ಸಂಸ್ಕೃತ ಸಂಬಂಧಿ ಸಾಧನೆಗಳಿಗೆ ಸಾಗಿ ಕೊನೆಗೆ ಮಧ್ಯಂತರ ಕಾಲದ ಶತಮಾನಗಳನ್ನು ಜಿಗಿದು ವಸಾಹತುಶಾಹಿ ಕಾಲಘಟ್ಟದಲ್ಲಿ ಶಿಕ್ಷಣದ ಬಗ್ಗೆ ಭಾರತೀಯರ ಚಿಂತನಶೀಲತೆಯನ್ನು ಪರಾಮರ್ಶಿಸುತ್ತದೆ. ಸಂಸ್ಕೃತೇತರ ಸಂಸ್ಕೃತಿಗಳ ಅಭಾವ, ತಮಿಳು ಸಂಗಂ ಪರಂಪರೆ, ಪರ್ಶಿಯನ್ ಹಾಗು ದೇಸಿ ಪರಂಪರೆಗಳು, ಶಿಕ್ಷಣಕ್ಷೇತ್ರದಲ್ಲಿ ಬ್ರಾಹ್ಮಣರ ಅಧಿಪತ್ಯದ ಸಮಸ್ಯೆಗಳು ಮೊದಲಾದ ಈ ಎಲ್ಲವನ್ನೂ ಕೈಬಿಟ್ಟಿರುವುದು ಅಚ್ಚರಿಯ ಸಂಗತಿಯೇನಲ್ಲ. ಇವುಗಳ ಬಾಯಿಮುಚ್ಚಿಸುವುದು ಶಿಕ್ಷಣದ ಕುರಿತ ಸಂವಾದಗಳಲ್ಲಿ ಹಳೇ ಕಾಂಗ್ರೆಸ್ ಮಾದರಿಯೇ ಆಗಿತ್ತು. ಭಾರತದ ಸಾಂಸ್ಕೃತಿಕ ಇತಿಹಾಸದ ವರ್ಣನೆಯಲ್ಲಿ ಇದು ಸರ್ವೇಸಾಮಾನ್ಯವಾಗಿ ಕಂಡುಬರುವ ಸಂಗತಿಯಾಗಿದೆ. ಭಾರತದ ಗತೇತಿಹಾಸದ ಈ ಚಿತ್ರಣವು ಅಪೂರ್ಣವೂ, ಏಕ ಆಯಾಮದ್ದೂ ಆಗಿದೆ ಎಂದು ಈಗ ನಾವು ಅರಿಯುತ್ತಿದ್ದೇವೆ. ಹಿಂದೆಯೂ ಅನೇಕ ಸಾಂಸ್ಕೃತಿಕ ಎಳೆಗಳಿದ್ದವು. ಕೆಲವೊಮ್ಮೆ ಅವುಗಳ ಪರಸ್ಪರ ಮಿಲನವು ನೂತನ ಮಹಾನ್ ಸಂಯೋಜನೆಗಳಿಗೆ, ಅರಳುವಿಕೆಗೆ ತೆರೆದುಕೊಂಡಂತೆಯೇ ಕೆಲವೊಮ್ಮೆ ಭೀಕರ ದಬ್ಬಾಳಿಕೆಗಳಿಗೆ ಕಾರಣವಾಗಿವೆ ಕೂಡ.ಶಿಕ್ಷಣದ ದೃಷ್ಟಿಕೋನದಿಂದ ಭಾರತೀಯ ಇತಿಹಾಸದ ಪೂರ್ಣಚಿತ್ರಣದ ಅಭಾವವು ಇದರ ಉದ್ದೇಶದ ಬಗ್ಗೆ ಅನಿಶ್ಚಿತತೆಯ ಆತಂಕಗಳನ್ನು ನನ್ನಲ್ಲಿ ಹುಟ್ಟುಹಾಕುತ್ತದೆ. ಬ್ರಾಹ್ಮಣಶಾಹಿ ಸುವರ್ಣಯುಗವು (Brahminical golden age) ಭಾರತಕ್ಕೆ ಮುಸಲ್ಮಾನರ ಆಗಮನದೊಂದಿಗೆ ಅಂತ್ಯಕಂಡಿತು ಎಂಬ ಕಥಾನಕವು ಸುಳ್ಳಾದರೂ ಇದು ಅನೇಕ ಹಿಂದೂ ಉಗ್ರವಾದಿ ಗುಂಪುಗಳ ಚಿಂತನೆಯ ತಳಹದಿಯಾಗಿ ರೂಪುಗೊಂಡಿದೆ. ಈ ಕಥಾನಕವು ಮಧ್ಯಕಾಲೀನ ಯುಗದ ಎಲ್ಲ ಸಾಧನೆಗಳನ್ನು, ವಿವಿಧ ವರ್ಗಗಳ, ಭಾಗಗಳ, ಸಮುದಾಯಗಳ ಹಾಗು ಸಂಸ್ಕೃತಿಗಳ ನಡುವಿನ ತಿಕ್ಕಾಟದಿಂದ ಉಂಟಾಗುವ ಸಂಕೀರ್ಣ ಸನ್ನಿವೇಶವನ್ನೂ ಕಡೆಗಣಿಸುತ್ತದೆ. ಆದಾಗ್ಯೂ, ಈ ಸಂಕುಚಿತ ಮನೋಭಾವದ ಕಥಾನಕವು ಕಾಂಗ್ರೆಸ್ ಕಾಲದಲ್ಲೂ ಸಮಾನವಾಗಿ ಚಾಲ್ತಿಯಲ್ಲಿತ್ತು. ಕಾಂಗ್ರೆಸ್ ಆಡಳಿತ ಕಾಲದ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಸಂವಾದಗಳು ಶಿಕ್ಷಣದ ಕೋಮುವಾದೀಕರಣವನ್ನು (communalisation of education) ಈ ಕಾಲಘಟ್ಟಕ್ಕೂ ಮೊದಲೇ ಕಾನೂನುಬದ್ಧಗೊಳಿಸಿದ್ದವು ಎಂದು ಪ್ರೊಫೆಸರ್ ಕೃಷ್ಣಕುಮಾರ್ ಅವರು ಪದೇಪದೇ ತೋರಿಸುತ್ತಲೇ ಬಂದಿದ್ದಾರೆ. ಈ ರೀತಿ ನೋಡಿದರೆ, ಹತ್ತೊಂಬತ್ತನೇ ಶತಮಾನದಲ್ಲಿ ಹೊರಹೊಮ್ಮಿದ ಕೆಲವು ಸಂವಾದಗಳನ್ನು ಹಿಂದುತ್ವವಾದಿಗಳು ಮುಂದುವರಿಸುತ್ತಿದ್ದು, ಇವುಗಳನ್ನು ಅನೇಕ ರಾಜಕೀಯ ತಂಡಗಳು ಬೆಂಬಲಿಸುತ್ತಿವೆ ಎನ್ನಬೇಕು. ಈ ನಿರಂತರತೆಯ ಮೂಲಕ ಅವು ಜನರ ಭರವಸೆ ಹಾಗು ನ್ಯಾಯಬದ್ಧತೆಗಳನ್ನು ಗಳಿಸುತ್ತವೆ. ಇದಕ್ಕೆ ವ್ಯತಿರಿಕ್ತವಾಗಿ, “ಹಿಂದೂವಾದದ

ಸುವರ್ಣಯುಗ ಮತ್ತು ಇಸ್ಲಾಮ್‌ನಿಂದ ಅದರ ನಾಶ'ದ ಗತೇತಿಹಾಸದ ಕಥನದ ಪ್ರಸ್ತುತಿಗಿಂತಲೂ ನಮ್ಮ ಇತಿಹಾಸವು ಹೆಚ್ಚು ಸಂಕೀರ್ಣಸ್ವರೂಪದ್ದೆಂಬ ತಥ್ಯವನ್ನು ಇನ್ನೂ ಕೂಲಂಕಷ ಅಧ್ಯಯನಗಳು ಹೊರಗೆಡವುತ್ತಿವೆ. ಈ ಹಂತದಲ್ಲಿ ನನ್ನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಭಾರತದ ಗತೇತಿಹಾಸವನ್ನು ನೋಡುವ ಧೋರಣೆಯನ್ನು ಕುರಿತ ಈ ಚರ್ಚೆಯ ಬಗ್ಗೆ ರಾಷ್ಟ್ರೀಯ ಶಿಕ್ಷಣನೀತಿಗೆ ಮಾರ್ಗದರ್ಶನವನ್ನು ಬಯಸುವ ಕಡತವೊಂದು ಅರಿತಿರಬೇಕೆನ್ನುವುದು ಅತಿಯಾದ ನಿರೀಕ್ಷೆಯಾದೀತೇ ಎಂಬ ಪ್ರಶ್ನೆ ಕಾಡುತ್ತದೆ. ಪ್ರಸಕ್ತ ಕಡತದ ಭಾರತೀಯ ಸಂಸ್ಕೃತಿಯ ಪ್ರತಿಪಾದನೆಯು ಹಿಂದಿನ ಕಾಂಗ್ರೆಸ್ ರೀತಿಯೊಂದಿಗೆ ಹೊಂದಿಕೊಂಡಿರುವುದು ಸಮಕಾಲೀನ ಹಿಂದುತ್ವದ ಆಕ್ರಮಣಶೀಲತೆ ಹಾಗು ಹಿಂಸಾಸ್ವರೂಪದ ತಿರಸ್ಕರಣವೇ? ಅಥವಾ ಅದನ್ನೇ ಹೊಳಪು ಮಾಡಿ  ಪ್ರತಿಪಾದಿಸಿ ಮತ್ತಷ್ಟು ಹೆಚ್ಚು ಗೌರವಾರ್ಹವಾಗಿಯೂ, ಸಂಪ್ರದಾಯಬದ್ಧವಾಗಿಯೂ ಮಾಡುವ ಹವಣಿಕೆಯೇ? ತಿರಸ್ಕರಣವೇ ಇದರ ಅರ್ಥ ಎಂಬುದು ನನ್ನ ಆಶಾವಾದವಾಗಿದೆ. ಆದಾಗ್ಯೂ, ಭಾರತದ ಸಾಂಸ್ಕೃತಿಕ ಇತಿಹಾಸವು ಹೆಚ್ಚು ನಿಖರವಾಗಿಯೂ, ಮಾಹಿತಿಪೂರ್ಣವಾಗಿರಬೇಕು ಎಂದು ನಿರೀಕ್ಷಿಸುವುದರಲ್ಲಿ ತಪ್ಪೇನೂ ಇಲ್ಲ.

ಹಿಂದುತ್ವವಾದಿ ಶಿಕ್ಷಣವು ತನ್ನ ಕೇಂದ್ರಬಿಂದುಗಳನ್ನಾಗಿಸಿರುವ ಪಡಿಯಚ್ಚುಗಳನ್ನು ಸ್ಪಷ್ಟವಾಗಿ ಭಗ್ನಮಾಡುವ ಪ್ರಯಾಸವು ಇನ್ನೂ ಉತ್ತಮತರದ್ದಾಗಿರುತ್ತಿತ್ತು. ಉದಾಹರಣೆಗೆ, ಬ್ರಾಹ್ಮಣವಾದಿ ಮಾದರಿಗಳಾದ ಗ್ರಾಂಥಿಕ ಜ್ಞಾನದ ಮೇಲರಿಮೆಯ ಭಾವವನ್ನು ಪ್ರಶ್ನಿಸುವುದನ್ನು, ಮಧ್ಯಕಾಲೀನ ಯುಗದಲ್ಲಿ ಹೊಮ್ಮಿದ ಸಂಮಿಶ್ರ ಸಂಸ್ಕೃತಿಯ ಬಗ್ಗೆ ಹಾಗು ಆ ಕಾಲದ ವಿಶ್ವವಿದ್ಯಾಲಯಗಳಲ್ಲಿ ನ್ಯಾಯಕ್ಕೆ, ಖಗೋಳಶಾಸ್ತ್ರಕ್ಕೆ ಹಾಗು ವೈದ್ಯಕೀಯ ವೃತ್ತಿಗೆ ಸಂಬಂಧಿಸಿದ ಜ್ಞಾನಸಂಚಯದ ಬಗ್ಗೆ ಕೇಳಲು ಹಿತವಾಗಿರುತ್ತಿತ್ತು. ಭಾರತೀಯ ಸಂಸ್ಕೃತಿ ಹಾಗು ಅದರ ಶೈಕ್ಷಣಿಕ ಪದ್ಧತಿಗಳ ಬಗ್ಗೆ ಇನ್ನೂ ಹೆಚ್ಚಿನ ವಾಸ್ತವಿಕ ಚಿತ್ರಣವನ್ನು ನೀಡುವ ಅನೇಕ ಉದಾಹರಣೆಗಳನ್ನು ನೀಡಬಹುದು. ಈ ವಿಚಾರವಾಗಿ ತೋರುವ ಜಾಣಮೌನದ ಕಾರಣದಿಂದ ದಕ್ಷಿಣ ಏಷ್ಯಾದ ಭಾಗದಲ್ಲಿ ಜ್ಞಾನದ ಉತ್ಪಾದನೆ ಹಾಗು ರಾಜ್ಯಗಳ ಸಾಮಾಜಿಕ ಸಂರಚನೆಗಳ ಮತ್ತು ಅಧಿಕಾರದ ನಡುವಿನ ಸಂಬಂಧವನ್ನು ಕುರಿತು ನಡೆಯುತ್ತಿರುವ ವ್ಯಾಪಕ ಸಂಶೋಧನೆಗಳನ್ನು ಅರಗಿಸಿಕೊಳ್ಳದವರು ಸುಲಭವಾಗಿ ಪ್ರಸ್ತುತ ಚಿತ್ರಣವನ್ನು ಅಂಗೀಕರಿಸುವಂತಾಗುತ್ತದೆ. ಇನ್ನೂ ಹೆಚ್ಚಿನ ಸಂಕೀರ್ಣ ವಾಸ್ತವಿಕತೆಯನ್ನು ಒತ್ತಿಹೇಳುವುದರಿಂದ ಈ ರೀತಿಯ ಸಂಭವನೀಯ ಅಂಗೀಕಾರವನ್ನು ತಡೆಯಲು ಸುಲಭವಾಗುತ್ತಿತ್ತು. ಸತ್ಯಕ್ಕೆ ಹತ್ತಿರವಾಗಿದೆ ಎಂಬ ಗುಣವೂ ಅದರ ಮುಡಿಗೇರುತ್ತಿತ್ತು.

**ಸಾಮಾಜಿಕ ಅಸಮಾನತೆ**

ಭಾರತದ ಶಿಕ್ಷಣಕ್ಷೇತ್ರದಲ್ಲಿ ಕಂಡುಬರುವ ಅಗಾಧವಾದ ಸಾಮಾಜಿಕ ಅಸಮಾನತೆ ಅದು ಎದುರಿಸುತ್ತಿರುವ ಅತಿದೊಡ್ಡ ಸವಾಲುಗಳಲ್ಲಿ ಒಂದಾಗಿದೆ. ಅತ್ಯಲ್ಪ ಸಂಖ್ಯೆಯ ಮಕ್ಕಳು ಶ್ರೇಷ್ಠ ಗುಣಮಟ್ಟದ ಶಾಲೆಗಳಿಗೆ ಹೋಗುತ್ತಿದ್ದರೆ, ಭಾರೀ ಹೆಚ್ಚಿನ ಸಂಖ್ಯೆಯ ಮಕ್ಕಳು ಕಾರ್ಯ ನಿರ್ವಹಿಸದ, ಶಿಕ್ಷಕರ ಕೊರತೆಯಿರುವ ಹಾಗು ಕೆಟ್ಟದಾಗಿ ನಡೆಯುತ್ತಿರುವ ಶಾಲೆಗಳಿಗೆ ಗತ್ಯಂತರವಿಲ್ಲದೆ ದಬ್ಬಲ್ಪಡುತ್ತಿದ್ದಾರೆ. ಸಾಮಾಜಿಕವಾಗಿ ಹಿಂದುಳಿದವರಿಗಾಗಿ, ಬಡಜನರಿಗಾಗಿ ಶಾಲೆಗಳ ಸುಧಾರಣೆಯ ಆಗ್ರಹವು ಇಂದಿನ ಮುಖ್ಯ ಅಂತಾರಾಷ್ಟ್ರೀಯ ಪ್ರವೃತ್ತಿಯಾಗಿದೆ. ಶಿಕ್ಷಣಮಟ್ಟದಲ್ಲಿ ಪ್ರಮುಖ ಸುಧಾರಣೆಗಳನ್ನು ತರಲು ಇದು ಜಗತ್ತಿನಾದ್ಯಂತ ಮುಖ್ಯ ಪ್ರೇರಣೆಯೂ ಆಗಿದೆ.

ಈ ಸವಾಲು ಒಡ್ಡುವ ಒತ್ತಾಯದ ಸ್ವರೂಪದ ಕಾರಣದಿಂದಾಗಿ ನೂತನ ಶಿಕ್ಷಣನೀತಿಯು ದೇಶದ ಜನತೆಯ ಮುಂದೆ ಪ್ರಸ್ತುತಪಡಿಸಲಿರುವ ಹೊಸ ಉಪಕ್ರಮಗಳ, ಅನುಸರಿಸಲಿರುವ ನೀತಿಗಳ ಬಗೆಗೆ ಅಗಾಧ ಕುತೂಹಲ ಇದ್ದದ್ದು ನಿಜ. ಒಳಸುರಿ ಕಡತವನ್ನು ಓದಿದವರಿಗೆ ಶಿಕ್ಷಣಕ್ಷೇತ್ರದ ಹಾಗು ಶಿಕ್ಷಣವು ಪ್ರಭಾವಿಸಲಿರುವ ಕ್ಷೇತ್ರಗಳಲ್ಲಿನ ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡಲು ಅದರಲ್ಲಿ ಅಡಕವಾಗಿರುವ ದೃಷ್ಟಿಕೋನದಲ್ಲಿ ಸ್ಪಷ್ಟತೆ ಇಲ್ಲದಿರುವುದು ಭಾಸವಾಗದೇ ಇರದು. ಕಡತವು ಕೆಲವು ಸ್ಥಳಗಳಲ್ಲಿ ಸಮಾನತೆಯ ಹರಿಕಾರನಂತೆ ಕಂಡುಬಂದರೆ, ಇನ್ನು ಕೆಲವು ಎಡೆಗಳಲ್ಲಿ ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸುತ್ತಲಿರುವ ಶಕ್ತಿಗಳಿಗೆ ಸಲೀಸಾಗಿ ತನ್ನನ್ನು ತಾನೇ ಅರ್ಪಿಸಿಕೊಳ್ಳುವಂತೆ ತೋರುತ್ತದೆ. ಧನಾತ್ಮಕ ಪಾರ್ಶ್ವವನ್ನು ಆಲೋಕಿಸಿದರೆ, ಐತಿಹಾಸಿಕವಾಗಿ ಹಿಂದುಳಿದ ಪಂಗಡಗಳ, ಉದಾಹರಣೆಗೆ, ಪರಿಶಿಷ್ಟ ಜಾತಿಗಳ, ಪರಿಶಿಷ್ಟ ಪಂಗಡಗಳ, ಇತರೆ ಹಿಂದುಳಿದ

ಜಾತಿಗಳ, ಮುಸಲ್ಮಾನರ ಹಾಗು ಉಳಿದವರಿಗಿಂತ ಹಿಂದುಳಿದ ಪ್ರಾಂತ್ಯಗಳ ಜನರ ಮಕ್ಕಳ ಶಾಲಾ ನೋಂದಾವಣೆಯಲ್ಲಿ ಹೆಚ್ಚಳವನ್ನು ಕಾಣುವ ಕಾಳಜಿಯು ಕಡತದ ಅನೇಕ ಎಡೆಗಳಲ್ಲಿ ಪ್ರಬಲವಾಗಿ ವ್ಯಕ್ತವಾಗುವುದನ್ನು ಕಾಣುತ್ತೇವೆ. (ಪು 10,15) "ಸಮನ್ವಯ ಶಿಕ್ಷಣ ಹಾಗು ವಿದ್ಯಾರ್ಥಿಗಳಿಗೆ ಬೆಂಬಲ" (ಪು 23-25) ಎಂಬ ಭಾಗದಲ್ಲಿ ವಿದ್ಯಾರ್ಥಿಗಳ ಬೆಂಬಲಕ್ಕೆ ನಿಲ್ಲುವುದು ನಮ್ಮ ಶಿಕ್ಷಣವ್ಯವಸ್ಥೆಯ ಆಧಾರ ಸ್ತಂಭವಾಗಿದ್ದು, ಅದನ್ನೊಂದು ಹಿನ್ನೆಣಿಕೆಯೆಂದು ಪರಿಗಣಿಸಲಾಗದು ಎಂಬ ಸ್ವಾಗತಾರ್ಹ ಅಂಗೀಕಾರವನ್ನು ಕಾಣುತ್ತೇವೆ. ಐತಿಹಾಸಿಕವಾಗಿ ಹಾಗು ಭೌತಿಕವಾಗಿ ಸೌಲಭ್ಯವಂಚಿತ ಹಿನ್ನೆಲೆಗಳಿಂದ ಬಹು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಶಿಕ್ಷಣವನ್ನರಸಿ ಬಂದರೂ, ತಮಗಿಂತ ಹೆಚ್ಚು ಸ್ಥಿತಿವಂತ ಹಿನ್ನೆಲೆಗಳಿಂದ ಬಂದವರೊಂದಿಗೆ ಹೆಗಲೆಣೆಯಾಗಿ ನಿಲ್ಲಲು ಪಡುವ ಹೆಣಗಾಟದಲ್ಲಿ ಕಳೆದುಹೋಗುವುದೇ ಹೆಚ್ಚು. ಪ್ರಾಥಮಿಕ ಶಾಲೆಗಳಿಂದ ಹಿಡಿದು ವಿಶ್ವವಿದ್ಯಾಲಯದವರೆಗೂ ಎಲ್ಲಾ ಶೈಕ್ಷಣಿಕ ಸಂಸ್ಥೆಗಳೂ ವಿದ್ಯಾರ್ಥಿಗಳು ಉಳಿದವರ ಸಮಕ್ಕೆ ನಿಂತು ತಮ್ಮ ಸಾಮರ್ಥ್ಯವನ್ನು ಸಾಕಾರಗೊಳಿಸಿಕೊಳ್ಳುವಂತೆ ನೋಡಿಕೊಳ್ಳಲು ತಮ್ಮ ವ್ಯವಸ್ಥಿತ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳ ಬೆಂಬಲಕ್ಕೆ ನಿಲ್ಲುವ ಪ್ರಕ್ರಿಯೆಗಳನ್ನು ಬೆಸೆಯುವ ಅಗತ್ಯವಿದೆ.

ಇವುಗಳಂತೆಯೇ ಸಮಾನತೆಯ ಪರವಾಗಿರುವ ಇತರ ಅನೇಕ ಕ್ರಮಗಳು ಇದ್ದರೂ, ಒಳಸುರಿ ಕಡತವು ವಾಸ್ತವದಲ್ಲಿ ಸಮಾನತೆಯನ್ನು ತರುವುದೆಂತು ಎಂಬ ಚಿಂತನೆಯಲ್ಲಿ ಇನ್ನೂ ಹೆಚ್ಚು ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದು ಅನ್ನಿಸದೇ ಇರದು. ಭಾರತದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಸಮಾನತೆಯು ಇಷ್ಟೊಂದು ತೀಕ್ಷ್ಣವಾಗಿದ್ದು, ಉಚ್ಚ, ಮಧ್ಯಮ ಹಾಗು ಕೆಳ ಹಂತಗಳ ನಡುವೆ ಇಂತಹ ಅಗಾಧ ತಾರತಮ್ಯಗಳು ಇರುವುದಕ್ಕೆ ಕಾರಣವಾದರೂ ಏನು ಎಂಬುದರ ಬಗ್ಗೆ ಕಡತವು ಚರ್ಚೆಗೆ ತೊಡಗುವುದೇ ಇಲ್ಲ. ಉದಾಹರಣೆಯಾಗಿ ತೆಗೆದುಕೊಳ್ಳುವುದಾದರೆ, ತದನಂತರದ ಶಿಕ್ಷಣ ಮಂಡಲಿಗಳಾಗಲೀ, ಶಿಕ್ಷಣನೀತಿಗಳಾಗಲೀ ಜಿಡಿಪಿಯ ಶೇಕಡಾ ೬ರಷ್ಟನ್ನು ಶಿಕ್ಷಣಕ್ಷೇತ್ರದಲ್ಲಿ ತೊಡಗಿಸಬೇಕೆಂಬ ತಮ್ಮ ಆಗ್ರಹದಲ್ಲಿ ಯಾವುದೇ ಮುನ್ನಡೆ ಸಾಧಿಸಲಾಗಿಲ್ಲ. ಈ ಆಗ್ರಹವನ್ನು ನೆರವೇರಿಸಲು ಆಗಿಲ್ಲ ಏಕೆ ಎಂಬುದರ ಬಗ್ಗೆ ಪರಾಮರ್ಶೆ ನಡೆಯದಿದ್ದರೆ ಪ್ರಸಕ್ತ ನೀತಿ ಉದ್ದೇಶಗಳ ಹಣೆಬರಹವೂ ೧೯೬೮ ಮತ್ತು ೧೯೮೬ರ ರಾಷ್ಟ್ರೀಯ ಶಿಕ್ಷಣನೀತಿಗಳದ್ದನ್ನೇ ಹೋಲುತ್ತದೆಯೆ ಎಂದು ಯಾರಿಗಾದರೂ ಸಂದೇಹ ಬರದೇ ಇರದು. ಎಲ್ಲಕ್ಕಿಂತ ಮಿಗಿಲಾಗಿ, ಇಲ್ಲಿ ಪ್ರತಿಪಾದಿಸಲಾಗಿರುವ ಕಾರ್ಯತಂತ್ರದಲ್ಲಿ ನಾವು ಯಶಸ್ಸು ಕಾಣುವುದು ಹೆಚ್ಚು ಸಂಭವನೀಯವೆಂಬ ಆಶಾವಾದವನ್ನು ಮೂಡಿಸುವ ಇಲ್ಲಿನ ವಿಶೇಷ ಭಿನ್ನತೆಯಾದರೂ ಏನು? ಎಲ್ಲರಿಗೂ (ಒಳ್ಳೆಯ) ಶಿಕ್ಷಣ ತಲುಪಿಸುವ ಹಾದಿಗೆ ಅಡ್ಡಗಾಲಾಗಿರುವ ಪಟ್ಟಭದ್ರ ಹಿತಾಸಕ್ತಿಗಳನ್ನು ಇದು ಗಮನಿಸುತ್ತದೆಯೇ? ಆ ಹಿತಾಸಕ್ತಿಗಳಾದರೂ ಯಾವುವು? ಇದನ್ನು ಬಿಟ್ಟು ಬೇರೆ ರೀತಿಯ ಅಡಚಣೆಗಳೂ ಇದ್ದಾವೇ? ಅವುಗಳನ್ನು ನಿವಾರಿಸಿಕೊಳ್ಳುವ ಬಗೆ ಎಂತು? ಈ ಮೂಲಭೂತ ಪ್ರಶ್ನೆಗಳನ್ನು ಕುರಿತು ಕಡತದಲ್ಲಿ ಯಾವುದೇ ಬೆಳಕನ್ನು ಚೆಲ್ಲಲಾಗಿಲ್ಲ. ಯಾವುದೇ ಪ್ರತಿಕ್ರಿಯೆಯನ್ನೂ ಕಾಣದಿರುವ ಮತ್ತೊಂದು ಮೂಲಭೂತ ಸಮಸ್ಯೆಯೆಂದರೆ ಶಾಲಾ ಪಠ್ಯಕ್ರಮದಲ್ಲಿ ಸಾಮಾಜಿಕ ಪಕ್ಷಪಾತಗಳನ್ನು ಕುರಿತಾದದ್ದು. ಪುಲೆಯವರ ಕಾಲದಿಂದಲೂ ಶೈಕ್ಷಣಿಕ ಪಠ್ಯಕ್ರಮಗಳು ಹಾಗು ಶಾಲಾ ಸಂಸ್ಕೃತಿಗಳು ನಗರಪ್ರದೇಶಗಳ, ಆರ್ಥಿಕತೆಯ ಸಂಘಟಿತ ವಲಯಗಳಿಗೆ-ವಿಶೇಷವಾಗಿ ಕೈಗಾರಿಕೆ ಮತ್ತು ಸೇವೆಗಳ ಅಗತ್ಯಗಳಿಗೆ-ಒಲವು ತೋರುವಂತೆ ಇರುತ್ತವೆ. ಪ್ರಸಕ್ತ ನೀತಿ ಕಡತವು ಇದನ್ನು ಸಮಸ್ಯೆಯ ಕ್ಷೇತ್ರವೆಂದೇ ಪರಿಗಣಿಸುವುದಿಲ್ಲ; ಶಿಕ್ಷಣದ ಲಾಭಗಳು ಬೇಸಾಯ, ಕರಕುಶಲತೆ ಹಾಗು ಅಸಂಘಟಿತ ವಲಯಗಳಿಗೂ ತಲುಪುವಂತೆ ವಿಸ್ತರಿಸುವ ಬಗ್ಗೆ ಯಾವುದೇ ಒತ್ತು ನೀಡುವುದಿಲ್ಲ. ನಾವು ಭಾರತದ ಶೈಕ್ಷಣಿಕ ಹಾಗು ಸಾಮಾಜಿಕ ಅಸಮಾನತೆಗಳನ್ನು ಕುಗ್ಗಿಸಲು ಬಯಸಿದ್ದೇ ಆದರೆ, ಪಠ್ಯಕ್ರಮದ ಈ ಅಂಶಗಳನ್ನು ಕಡೆಗಣಿಸುತ್ತಲೇ ಇರಲು ಸಾಧ್ಯವಿಲ್ಲ. ಅಷ್ಟೇ ಮುಖ್ಯ ವಿಷಯವೆಂದರೆ, ಶಾಲಾ ಪಠ್ಯಕ್ರಮದಲ್ಲಿ ಏನು ಇರಬೇಕು ಎಂಬುದರ ಬಗ್ಗೆಗೆ ಸಾಮಾನ್ಯವಾಗಿ ಇರುವ ನಂಬಿಕೆಗಳನ್ನೇ ಒಳಸುರಿ ಕಡತದ ವಿವಿಧ ಭಾಗಗಳ ಉದ್ದಗಲಕ್ಕೂ ಮುಗ್ಧವಾಗಿ ಅಂಗೀಕರಿಸಿರುವುದನ್ನು ಕಾಣುತ್ತೇವೆ. ಅದು ಪಠ್ಯಕ್ರಮದ ಸಾಂಸ್ಕೃತಿಕ ರಾಜಕೀಯವನ್ನು ಗುರುತಿಸಿರುವಂತೆಯೇ ಕಾಣುವುದಿಲ್ಲ, ಈ ರಾಜಕೀಯದ ಮೂಲಕ ಕೆಲವು ವರ್ಗ, ಕಸುಬು, ಜಾತಿ, ಪುರುಷ ಸಮಾಜ, ಕೆಲವು ಭಾಷೆ ಹಾಗು ಕೆಲವು ಪ್ರಾಂತ್ಯಗಳು ಸಾಧಿಸಲು ಬಯಸುವ ಹತೋಟಿಗೆ ಬಲತುಂಬಿದಂತೆ ಆಗುತ್ತದೆ. ಮಹಿಳೆಯರಿಗಾಗಲೀ, ದೇಶದ ಈಶಾನ್ಯ ಭಾಗದ ಜನರಾಗಲೀ ಮುನ್ನೆಲೆಗೆ ಬರಲು, ಅವರಿಗೂ ಒಂದು ಸಕ್ರಿಯ ಪಾತ್ರವೊದಗುವಂತೆ ನೋಡಿಕೊಳ್ಳಲು ಯಾವುದೇ ಶಿಫಾರಸುಗಳಾಗಲೀ ಇಲ್ಲ. ಜ್ಞಾನವನ್ನು, ಅದರ ಸೃಷ್ಟಿ ಹಾಗು ಪುನರ್‌ಸೃಷ್ಟಿಗಳನ್ನು ಸಮಸ್ಯೆಯಾಗಿ ಪರಿಗಣಿಸುವ ಧೋರಣೆಯ

ಬಗ್ಗೆ ಕೆಲವು ದುರ್ಬಲವೂ, ವಿರಳವಾಗಿ ಕಾಣುವಂತಹವೂ ಆದ ಸೂಚನೆಗಳು ದೊರೆಯುತ್ತವೆ.
ಇಲ್ಲಿನ ಸರ್ವೇಸಾಮಾನ್ಯ ಎಳೆಯೆಂದರೆ ಕೌಶಲ್ಯಗಳ ಬೋಧನೆಯ ಅಗತ್ಯ ಹಾಗು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನದ ಬಳಕೆ. ಆದರೆ ಇದು, ಭಾರತದ ಶಿಕ್ಷಣ ಸಂಬಂಧಿ ಸಮಸ್ಯೆಗಳು ತಾಂತ್ರಿಕಜ್ಞಾನದ ವಲಯದಲ್ಲಿ, ಅದರಲ್ಲೂ (ಬೇಸಾಯ ಮೊದಲಾದವುಗಳಲ್ಲಿ ಅಲ್ಲದೆ) ಕೈಗಾರಿಕೆಯಲ್ಲಿ ಬಳಕೆಯಾಗುವ ತಾಂತ್ರಿಕಜ್ಞಾನದ ವಲಯದಲ್ಲಿ ಮಾತ್ರ ಇವೆ ಎಂದು ಸೂಚಿಸುತ್ತದೆ. ಇದು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ತಿಳುವಳಿಕೆಯ ಸಮಸ್ಯೆಯ ಸಂಕೀರ್ಣತೆಯನ್ನು ಅತಿ ಸರಳವಾಗಿ ಪರಿಗಣಿಸುವ ರೀತಿಯಾಗಿದೆ. ನಾವೇನಾದರೂ ಸಾಮಾಜಿಕ ಸಮಾನತೆಯ ಗುರಿಯೆಡೆಗಿನ ಚಲನೆಯಲ್ಲಿ ವೇಗೋತ್ಕರ್ಷ ಕಾಣಬೇಕೆಂದರೆ ನಾವು ಬಡವರು ಹಾಗು ಹಿಂದುಳಿದವರನ್ನು ಸಬಲರನ್ನಾಗಿಸುವಂತಹ ಜ್ಞಾನಗಳಿಗೆ ಉತ್ತೇಜನ ನೀಡಬೇಕಿದೆ. ಹೀಗೆ ಮಾಡಿದಾಗ ಅವರಿಗೆ ಸಮಾಜದಲ್ಲಿ ಹೆಚ್ಚಿನ ದನಿಯನ್ನು ಮತ್ತು ಹೆಚ್ಚಿನ ಚಲನಶೀಲತೆಯನ್ನು ಒದಗಿಸಿದಂತಾಗುತ್ತದೆ. ಇದರ ಅರ್ಥ, ನಾವು ಯಾವ ರೀತಿಯ ಸಂಸ್ಕೃತಿಯನ್ನು ಬೋಧಿಸಬೇಕು ಎಂಬುದರ ಕಡೆ ಹೊಸದಾಗಿ ದೃಷ್ಟಿ ಹಾಯಿಸಿ ಜನರನ್ನು ಸಬಲರನ್ನಾಗಿಸುವಂತಹ, ಅವರನ್ನು ಮುಕ್ತರನ್ನಾಗಿಸುವಂತಹ ಸಂಸ್ಕೃತಿಯನ್ನು ಪ್ರೋತ್ಸಾಹಿಸಬೇಕಿದೆ.
ಕಡತದ ಉದ್ದಕ್ಕೂ ಕೆಲವು ಚರ್ವಿತಚರ್ವಣಗಳನ್ನು ಕಾಣುತ್ತೇವೆ. ಅನೇಕ ಪೀಳಿಗೆಗಳ ಉದ್ದಕ್ಕೂ ಭಾರತೀಯ ಸಮಾಜದ ಅಗತ್ಯಗಳ ಕುರಿತ ಸಂವಾದಗಳ ಮೂಲಕ ನಡೆದಿರುವ ಅಗಾಧ ಕಾರ್ಯದ ಬಗ್ಗೆ ಕಡತವು ನಿರ್ಲಕ್ಷ್ಯ ವಹಿಸಿದೆ ಎಂದೇ ತೋರುತ್ತದೆ. ಭಾರತೀಯ ಸಂವಿಧಾನವು ಎತ್ತಿಹಿಡಿಯುವ ಬೋಧನೆಯ ಹಕ್ಕು ಮತ್ತು ಕರ್ತವ್ಯಗಳ ಪ್ರಾಧಾನ್ಯದ ಕುರಿತ ಉಲ್ಲೇಖ (ಪು. 21) ಒಂದು ಒಳ್ಳೆಯ ಉದಾಹರಣೆ. ನಮ್ಮ ಶಾಲೆಗಳಲ್ಲಿ ಸಮಾಜವಿಜ್ಞಾನವನ್ನು ಬೋಧಿಸುವ ಅಸಂಖ್ಯಾತ ವಿದ್ವಾಂಸರು ಸಾಂವಿಧಾನಿಕ ಮೌಲ್ಯಗಳನ್ನು ಬೋಧಿಸುವ ವಿಚಾರವಾಗಿ ಹೊಸತನ, ತಾಜಾತನಗಳನ್ನು ತೋರುವ ವಿಧಾನದ ಅಗತ್ಯವಿದೆ ಎಂದು ಗುರುತಿಸುತ್ತಾರೆ. ಗಿಳಿಪಾಠದಂತೆ ಯಾಂತ್ರಿಕವಾಗಿ, ಸಾರಹೀನವಾಗಿ ಸಾಂವಿಧಾನಿಕ ಹಕ್ಕು ಮತ್ತು ಕರ್ತವ್ಯಗಳನ್ನು ನಾವು ದಶಕಗಳಿಂದ ಬೋಧಿಸಿಕೊಂಡೇ ಬಂದಿದ್ದೇವೆ. ನಿಜ ಹೇಳಬೇಕೆಂದರೆ, ಸಂವಿಧಾನದ ಬಗ್ಗೆ ಈ ರೀತಿಯ ಬೋಧನೆಯು ಅಂಕಗಳನ್ನು ಗಳಿಸಲು ಇರುವ ಬಾಲಿಶ ವ್ಯಾಯಾಮವಷ್ಟೇ ಆಗುತ್ತದಲ್ಲದೆ, ನಮ್ಮ ಸಂವಿಧಾನವು ನಿರ್ಜೀವ, , ಒಂದು ಅಸಂಗತ ಕಡತವೂ ಆಗಿದ್ದು, ಅದರ ಬದಲಿಗೆ ನೈತಿಕ ಪೊಲೀಸ್‌ಗಿರಿಯ ಮೊರೆಹೋಗುವುದು ಉತ್ತಮ ಎಂಬ ಅರ್ಥವನ್ನು ಕೆಲವೊಮ್ಮೆ ಇದು ನೀಡುತ್ತದೆ ಕೂಡ. ರಾಜಕೀಯ ಹಾಗು ಸಾಮಾಜಿಕ ಜ್ಞಾನವನ್ನು ನಮ್ಮ ಶಿಕ್ಷಣವ್ಯವಸ್ಥೆಯ ಸಜೀವ ಅಂಗಭಾಗವಾಗಿ ಮಾರ್ಪಡಿಸುವಂತಹ ಪರ್ಯಾಯವು ಏನಿರಬಹುದು ಎಂದು ನೀತಿ ಶಿಫಾರಸುಗಳ ಕಡತದಲ್ಲಿ ಹುಡುಕುವುದು ವ್ಯರ್ಥಪ್ರಯಾಸವಾಗುತ್ತದೆ. ಹಕ್ಕುಗಳ ಪರಿಕಲ್ಪನೆಯು ಹೊರಹೊಮ್ಮಿದುದಾದರೂ ಏತಕ್ಕೆ ಎಂಬುದನ್ನು ಹಾಗು ಅವುಗಳ ಲಾಭಗಳನ್ನು ಅರ್ಥಮಾಡಿಕೊಳ್ಳಲು, ಅವುಗಳು ಮೂರ್ತರೂಪ ತಾಳುವುದಕ್ಕೂ ಮುನ್ನ ನಡೆದಿರಬಹುದಾದ ಚರ್ಚೆ, ಹೋರಾಟಗಳಿಗೆ ಸ್ಪಂದಿಸಲು ನಮ್ಮ ಯುವಜನತೆಯು ಸಮರ್ಥರಾದಾಗ ಈ ಪ್ರಗತಿಪರ ತತ್ತ್ವಗಳನ್ನು ಜೀರ್ಣಿಸಿಕೊಳ್ಳಲು ಮುಂದಾಗುತ್ತಾರೆ. ಇಂತಹ ಪಠ್ಯಕ್ರಮ ಹಾಗು ಬೋಧನಕಲೆಗಳ ಮೂಲಕ ತಮ್ಮ ಸುತ್ತಮುತ್ತಲಿನವರನ್ನು ಗೌರವದಿಂದ ಕಾಣುವ ಪ್ರಜಾಸತ್ತಾತ್ಮಕವೂ, ಚಿಂತನಾಪರವೂ ಆದ ಸಾಮಾಜಿಕ ನಡುವಳಿಕೆಯು ಮೂಡಬಹುದು.

ಆದಾಗ್ಯೂ, ಸಮಗ್ರವಾಗಿ ಅವಲೋಕಿಸಿದರೆ, ಯುವಜನತೆಯು ನಮ್ಮ ಸಮಾಜ, ರಾಜಕಾರಣ ಹಾಗು ಆರ್ಥಿಕತೆಗಳ ಬಗ್ಗೆ ಕಲಿಯುವುದು ಮುಖ್ಯವೆಂದು ಕಡತವು ಪರಿಗಣಿಸಿದಂತೆ ತೋರುವುದಿಲ್ಲ. ಹಾಗಾಗಿ, ನಮ್ಮ ಯುವಜನತೆಯು ತಮ್ಮ ಸುತ್ತಮುತ್ತಲಿನ ಸಂಗತಿಗಳಲ್ಲಿ ಸಕ್ರಿಯವೂ, ನ್ಯಾಯಪಕ್ಷಪಾತಿಯೂ ಆದ ಆಸಕ್ತಿಯನ್ನು ತೋರುವಂತಾಗಲು ಅತ್ಯುತ್ತಮ ಬೋಧನೆಯ ವಿಧಾನ ಯಾವುದು ಎಂಬುದರ ಬಗ್ಗೆ ಚಿಂತನೆ ಮೊಳೆಯಲು ಹೇಗೆ ಸಾಧ್ಯ? ಈ ಕಡತದ ಪರಿಕಲ್ಪನೆಯ ಚೌಕಟ್ಟಿನಿಂದ ಸಮಾಜವಿಜ್ಞಾನ ಹಾಗು ಮಾನವಿಕ ವಿಭಾಗಗಳಿಗೆ ಸಂಬಂಧಿಸಿದ ವಿಚಾರಗಳನ್ನು ಸುತಾರಾಂ ಕೈಬಿಡಲಾಗಿದೆ. ಅದನ್ನು ಬಿಟ್ಟು, ತಥಾಕಥಿತ "ನೀತಿಶಿಕ್ಷಣ" (ethics education) ವನ್ನು ಸಾಮಾಜಿಕ ನ್ಯಾಯ, ಸಮಾನತೆ, ಸ್ತ್ರೀಗೌರವ ಇವೇ ಮೊದಲಾದ ಗುಣಗಳ ಪ್ರಸಾರಕ್ಕೆ ಪರ್ಯಾಪ್ತವೆಂದು ಪರಿಗಣಿಸಲಾಗಿದೆ (ಪು 31). 1986/92ರ ಕಡತವಾದರೋ ಸಮಾಜವಿಜ್ಞಾನ ಹಾಗು ಮಾನವಿಕ ಶಾಸ್ತ್ರಗಳನ್ನು ಪೋಷಿಸುವ ಮಹತ್ತ್ವದ ಬಗ್ಗೆ ಮುಖಸ್ತುತಿಯನ್ನಾದರೂ ಮಾಡಿತ್ತು, ಆದರೆ, ಈ ಉದ್ದೇಶಿತ ಕಡತವು ಇದರ ಬಗ್ಗೆ ತೋರುವ

ದಿವ್ಯನಿರ್ಲಕ್ಷ್ಯವು ಹಳೆಯ ಕಡತಗಳ ಆಶಯಗಳಿಂದ ದೂರಸರಿಯುತ್ತಿರುವ ಮಹತ್ತ್ವದ ಬೆಳವಣಿಗೆ ಎನ್ನಬಹುದು. ಮೌಲ್ಯಯುತ ಶಿಕ್ಷಣದ ಬಗ್ಗೆ ಮಗು ತನ್ನಷ್ಟಕ್ಕೆ ತಾನೇ ಕಲಿಯುತ್ತದೆ ಎಂದು ಅನೇಕ ರಾಜಕೀಯ ಹಾಗು ಸಾಮಾಜಿಕ ಗುಂಪುಗಳು ನೀಡುವ ಬೇಜವಾಬ್ದಾರಿ ಹೇಳಿಕೆಯನ್ನು ಇದು ನೆನಪಿಗೆ ತರುತ್ತದೆ. ಹಾಗೆ ಹೇಳುವುದು, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗು ಆರ್ಥಿಕ ಸಂಬಂಧಗಳ ಚಾಲಕಶಕ್ತಿಗಳ ಉಲ್ಲೇಖವೇ ಇಲ್ಲದೆ ಇದನ್ನು ಕಲಿಸಬಹುದು ಎಂದಂತೆ.

ಸಾಮಾಜಿಕ ಅಸಮಾನತೆಗಳನ್ನು ಅರ್ಥಮಾಡಿಕೊಳ್ಳಲು, ಅವುಗಳನ್ನು ನಿವಾರಿಸಿಕೊಳ್ಳುವ ಹಾದಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಮಗೆ ಸಾಮರ್ಥ್ಯ ನೀಡುವ ಬೋಧನಶಾಖೆಗಳು, ಶೈಕ್ಷಣಿಕ ವಿಷಯಗಳು ತಮ್ಮ ಸೋಲನ್ನು ಒಪ್ಪಿಕೊಂಡಿರುವುದು ಪ್ರಸಕ್ತ ಭಾರತೀಯ ಶಿಕ್ಷಣದ ದುಃಖದಾಯಕ ಸಂಗತಿ ಎನ್ನಬಹುದು. ಸಾಮಾಜಿಕ ಅಸಮಾನತೆಯ ಕಾರಣಗಳನ್ನು ನಮ್ಮ ಇಡೀ ಸಾಮಾಜಿಕ ಸಂಘಟನೆಯಲ್ಲಿ ಹುಡುಕುವ ಅಗತ್ಯವಿದೆ. ಆಗ ಮಾತ್ರ ನಾವು ಅದನ್ನು ಬುಡ ಸಮೇತ ಕಿತ್ತೊಗೆಯಲು ಸಾಧ್ಯ. ದುರದೃಷ್ಟವಶಾತ್, ಒಳಸುರಿ ಕಡತವು ಭಾರತೀಯ ಸಂಸ್ಕೃತಿಯಲ್ಲಿ ಬೆಳೆಯುತ್ತಿರುವ ಈ ಅಜ್ಞಾನವನ್ನಷ್ಟೇ ವ್ಯಕ್ತಪಡಿಸುತ್ತದೆ. ತಾನು ವ್ಯಕ್ತಪಡಿಸುವ ಕೊರತೆಗೆ ಸ್ಪಂದಿಸುವುದನ್ನು ಅದರಿಂದ ನಿರೀಕ್ಷಿಸುವುದು ಗಗನಕುಸುಮವಾದೀತು.

**ಖಾಸಗೀಕರಣ**

ಯಾವ ಪ್ರಧಾನ ರಾಷ್ಟ್ರೀಯ ನೀತಿ ಕಡತವೂ ಆಹ್ವಾನವೀಯದೆ ಶಿಕ್ಷಣದ ಖಾಸಗೀಕರಣವೆಂಬ ಪೆಡಂಭೂತವು ತನ್ನಷ್ಟಕ್ಕೆ ತಾನೆ ಭಾರತೀಯ ಶಿಕ್ಷಣದ ಶಿಬಿರಕ್ಕೆ ನುಗ್ಗಿ, ತಾನೇ ಶಿಬಿರದ ಮಾಲೀಕ ಎನ್ನುವ ಒಂಟೆಯಂತಾಗಿದೆ. ತೃತೀಯ ಶಿಕ್ಷಣರಂಗದಲ್ಲಿ ಆಗಲೇ ಬಹುತೇಕ ವಿದ್ಯಾರ್ಥಿಗಳು ಖಾಸಗೀ ಸಂಸ್ಥೆಗಳಲ್ಲಿ ಓದುತ್ತಿದ್ದಾರೆ, ಶಾಲಾಶಿಕ್ಷಣದಲ್ಲಿ ಅವರ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಬೆಳೆಯುತ್ತಲೇ ಇದೆ. ಇಷ್ಟಾದರೂ, ಹಿಂದಿನ ೧೯೮೬/೧೯೯೨ರ ರಾಷ್ಟ್ರೀಯ ಶಿಕ್ಷಣನೀತಿಯು ಪಠ್ಯಕ್ರಮದ ರಾಜಕೀಯದ ಮೇಲೆ ಹಾಗು ಸಾಮಾಜಿಕ ಅಸಮಾನತೆಯ ವಿಚಾರಗಳ ಮೇಲೆ ಇಷ್ಟೊಂದು ಪರಿಣಾಮ ಬೀರುವ ಈ ಮಟ್ಟಿನ ಆಘಾತಕಾರಿ ಬದಲಾವಣೆಗೆ ಅನುಮತಿ ನೀಡಿದ್ದೇ ಇಲ್ಲ. ಪ್ರಸಕ್ತ ಒಳಸುರಿ ಕಡತವೂ ಕೂಡ ಶಿಕ್ಷಣದ ಖಾಸಗೀಕರಣವನ್ನು ಒಂದು ನೀತಿಧೋರಣೆ ಎಂದಾಗಲೀ, ಕಾರ್ಯತಂತ್ರವೆಂದಾಗಲೀ ನೇರವಾಗಿ ಪರಿಶೀಲಿಸುವುದೇ ಇಲ್ಲ. ಖಾಸಗೀಕರಣವಾದರೋ ಇಂದು ಜೀವನದ ಒಂದು ಸಾಮಾನ್ಯ ತಥ್ಯವೆಂದು ತೋರುತ್ತಿದ್ದು, ಅದನ್ನು "ಆವಶ್ಯಕ ಕೇಡು" ಎಂದು ನಾವೆಲ್ಲಾ ಅಂಗೀಕರಿಸಿದಂತೆ ಭಾಸವಾಗುತ್ತಿದೆ. ಸೌಲಭ್ಯಗಳ ಬಗೆಗಾಗಲೀ, ಖಾಸಗೀಕರಣಕ್ಕೆ ತೆರಬೇಕಾದ ಬೆಲೆಯ ಬಗ್ಗೆಯಾಗಲೀ ಮೂಲಭೂತ ಪರಾಮರ್ಶೆಯೇ ಇಲ್ಲದಿರುವುದು ಆಶ್ಚರ್ಯದಾಯಕ. ಯಾವುದೇ ವಿವಾದಾತ್ಮಕ ವಿಚಾರದ ಬಗ್ಗೆ ನೇರ ಹಾಗು ದಿಟ್ಟ ನಿಲುವನ್ನು ನೀತಿ ಕಡತಗಳು ಪ್ರದರ್ಶಿಸಬೇಕು ಎಂದು ನಿರೀಕ್ಷಿಸಲಾಗುತ್ತದೆ; ಅಲ್ಲದೇ, ವಿವಾದಾತ್ಮಕ ವಿಷಯಗಳ ಪರವಾಗಿ ಇದೆಯೋ, ಇಲ್ಲ ಅವುಗಳನ್ನು ವಿರೋಧಿಸುತ್ತದೆಯೋ ಎಂಬುದನ್ನು ಅದು ಸ್ಪಷ್ಟಪಡಿಸಬೇಕಾಗುತ್ತದೆ. ಅಥವಾ, ಯಾವುದೇ ರೀತಿಯ ಒಪ್ಪಂದ ಅಥವಾ ಅರ್ಧಮಾರ್ಗದ ಪರಿಹಾರಕ್ಕಾಗಿ ಅದು ಎಳಸುತ್ತಿದ್ದರೆ, ಅದನ್ನೂ ಕಡತವು ವಿಶದಪಡಿಸಬೇಕಾಗುತ್ತದೆ. ಆದರೆ, ಖಾಸಗೀಕರಣದ ಬಗ್ಗೆ ಗಂಭೀರ, ಮುಖಾಮುಖಿ ಚರ್ಚೆಗಾಗಿ ಈ ಉದ್ದೇಶಿತ ನೀತಿ ಕಡತವನ್ನು ಹುಡುಕಾಡುವುದು ವ್ಯರ್ಥಪ್ರಯಾಸ.

ಎಲ್ಲರಿಗೂ ಒಳ್ಳೆಯ ಶಿಕ್ಷಣ ಸಿಗುವುದನ್ನು ಖಾತ್ರಿಪಡಿಸುವುದು ಸರ್ಕಾರದ ಜವಾಬ್ದಾರಿಯಾಗಿದ್ದು ಅದರಿಂದ ತಾನು ಕಳಚಿಕೊಳ್ಳುವುದಿಲ್ಲ ಎಂಬ ಭರವಸೆಯನ್ನು ನೀಡುವ ಅನೇಕ ಹೇಳಿಕೆಗಳಂತೂ ಕಡತದುದ್ದಕ್ಕೂ ಕಾಣಸಿಗುತ್ತವೆ. ಒಟ್ಟು ದೇಸೀಯ ಉತ್ಪಾದನೆಯ ಶೇಕಡಾ ೬ರಷ್ಟನ್ನು ಅವಶ್ಯವಾಗಿ ಶಿಕ್ಷಣಕ್ಷೇತದಲ್ಲಿ ತೊಡಗಿಸಲಾಗುತ್ತದೆ (ಪು. ೧೩) ಎಂಬ ಪುನರುಚ್ಚಾರಗಳು (೧೯೬೮ ಮತ್ತು ೧೯೮೬/೯೨ರ ನೀತಿಗಳಲ್ಲಿ ಇರುವಂತೆಯೇ) ಈ ಭರವಸೆಯ ಅಂಗವಾಗಿ ಇವೆ. ಭಾರತದಲ್ಲಿ ಶಿಕ್ಷಣವು "ಸಾರ್ವಜನಿಕರ ಹಿತಕ್ಕಾಗಿ ಇದೆ ಎಂದು ಪರಿಗಣಿಸಬೇಕು" ಎಂಬ ಮಹತ್ತ್ವಪೂರ್ಣ ಹೇಳಿಕೆ ಕಂಡುಬರುತ್ತದೆ. (ಪು. ೪೦) ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕೇವಲ ಪ್ರಾಥಮಿಕ ಶಿಕ್ಷಣವನ್ನಾಗಲೀ, ಶಾಲಾಶಿಕ್ಷಣವನ್ನಾಗಲೀ ಮನಸ್ಸಿನಲ್ಲಿಟ್ಟು ಸಾರ್ವಜನಿಕರ ಹಿತಕ್ಕಾಗಿ ಇದೆ ಎಂಬ ಹೇಳಿಕೆ ಹೊರಟಿಲ್ಲ, ಬದಲಿಗೆ ಸಾರ್ವತ್ರಿಕ ಶಿಕ್ಷಣವನ್ನೇ ಅದು ಸಾರ್ವಜನಿಕ ಹಿತವೆಂದು ಒತ್ತಿಹೇಳುತ್ತಿರುವುದು; ಅಂದರೆ, ನೀರು, ಗಾಳಿಗಳಂತೆ ಅದು ಎಲ್ಲರಿಗೂ ಲಭ್ಯವಿರಬೇಕು.ಖಾಸಗಿ ವಲಯವು ತನಗೆ ತಾನೇ ಶ್ರೇಷ್ಠತೆಯನ್ನು ಆರೋಪಿಸಿಕೊಳ್ಳುವ

ಬಗ್ಗೆ (ಪು.8) ಹಾಗು ಸರ್ಕಾರಿ ಶಾಲೆಗಳಿಗಿಂತ ತಾನು ಮೇಲೆಂಬ ಖಾಸಗಿ ಶಾಲೆಗಳ ಅನುಮಾನಾಸ್ಪದ ಹೇಳಿಕೆಯ ಬಗ್ಗೆ ಸಂದೇಹ ವ್ಯಕ್ತಪಡಿಸುವ ಟೀಕೆಗಳು ಕಂಡುಬರುತ್ತವೆ.

ಜೊತೆಗೆ, 'ಶಿಕ್ಷಣರಂಗದ ಮುಖ್ಯ ಸವಾಲುಗಳು' (Key Challenges in the Education Sector) ಎಂಬ ಶೀರ್ಷಿಕೆ ಹೊತ್ತ ಅಧ್ಯಾಯದಲ್ಲಾದರೋ ಖಾಸಗೀಕರಣವಾಗಲೀ, ಹೆಚ್ಚುತ್ತಲೇ ಇರುವ ಶಿಕ್ಷಣದ ವೆಚ್ಚ ಹಾಗು ತತ್ಪರಿಣಾಮವಾಗಿ ತೀವ್ರಗೊಳ್ಳುತ್ತಿರುವ ಸಾಮಾಜಿಕ ಅಸಮಾನತೆಗಳಾಗಲೀ ಪ್ರಧಾನ ಚರ್ಚಾವಿಷಯವಾಗಿ ಕಾಣಿಸಿಕೊಳ್ಳುವುದೇ ಇಲ್ಲ ಎಂಬುದು ನಿಜಕ್ಕೂ ಅಚ್ಚರಿ ಮೂಡಿಸುತ್ತದೆ. ಏಕೆಂದರೆ, ಭಾರತೀಯ ಶಿಕ್ಷಣರಂಗದಲ್ಲಿ ಅಸಮಾನತೆಯು ಬೆಳೆಯಲು ಅತಿ ದೊಡ್ಡ ಕಾರಣವೇ ಖಾಸಗೀಕರಣ. ಉಳಿದ ಅನೇಕ ಸಮಸ್ಯೆಗಳ ಜೊತೆಗೆ ಅವಕಾಶದಲ್ಲಿನ ಅಸಮಾನತೆಗಳನ್ನು ಚರ್ಚಿಸಲಾಗಿದ್ದರೂ ಇವುಗಳು ಉಲ್ಬಣವಾಗುವಲ್ಲಿ ಖಾಸಗೀಕರಣದ ಪಾತ್ರವು ಇಲ್ಲಿ ಚರ್ಚೆಗೆ ಅರ್ಹವೆಂಬಂತೆ ತೋರುವುದಿಲ್ಲ. "ಆಡಳಿತ ಹಾಗು ನಿರ್ವಹಣೆ" (Governance and Management) (ಪು. ೧೨) ಎಂಬ ಭಾಗದಲ್ಲಿ ಶಿಕ್ಷಣದ ವ್ಯಾಪಾರೀಕರಣದ ಬಗ್ಗೆ ಕಾಣಸಿಗುವ ವಾಕ್ಯವನ್ನು ಹೊರತುಪಡಿಸಿ ಇನ್ನಾವ ಉಲ್ಲೇಖವೂ ಕಾಣಸಿಗದು.

ಶಿಕ್ಷಣಕ್ಷೇತ್ರದಲ್ಲಿ ಹಣಹೂಡಿಕೆ (financing education)ಎಂಬ ಭಾಗವು ದತ್ತಿ ಸಂಸ್ಥೆಗಳಿಗೆ ಹಾಗು ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ಎನ್ನಲಾಗುವ ಅಂಗಗಳಿಗೆ ಶಿಕ್ಷಣದ ಪ್ರಸಾರ, ಪ್ರೋತ್ಸಾಹಗಳಲ್ಲಿ ಭಾಗವಹಿಸುವಂತೆ ಆಹ್ವಾನವೀಯುತ್ತದೆ. ಆದರೆ, ಶಿಕ್ಷಣ ಎಂಬುದು ಲಾಭದಾಯದ ಚಟುವಟಿಕೆ ಎಂದು ಪರಿಗಣಿಸಕೂಡದು ಎಂದು ಹೇಳುವ ಯಾವುದೇ ಹೇಳಿಕೆಯೂ ಎಲ್ಲೂ ಕಾಣಸಿಗುವುದಿಲ್ಲ. ಈ ನಿರ್ದಿಷ್ಟ ವಿಚಾರದ ಬಗ್ಗೆ ಬಂದ ಕೆಲವು ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಪ್ರಸ್ತಾವಗಳಿಗೆ ಪ್ರಬಲ ವಿರೋಧ ವ್ಯಕ್ತವಾದುದರಿಂದ ಇಲ್ಲಿನ ಸೂಕ್ಷ್ಮವೊಂದು ಮಹತ್ತ್ವ ಪಡೆಯುತ್ತದೆ. ಆದರೆ ಕಾರ್ಪೋರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ (CSR) ಎಂಬ ಹೆಸರಿನಡಿ ಸಾರ್ವಜನಿಕ ಸಂಪನ್ಮೂಲಗಳು ಖಾಸಗಿ ವಲಯಕ್ಕೆ ಅರ್ಪಿತವಾಗಿ ಅದು ಅವುಗಳನ್ನು ಭಾರಿ ಲಾಭದಾಯಕ ಉದ್ಯಮವಾಗಿಸಬಹುದು ಎಂಬ ಸಾಧಾರವಾದ ಆತಂಕವನ್ನು ಅನೇಕರು ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ಸಂಪನ್ಮೂಲಗಳನ್ನು ಗುಟ್ಟಾಗಿ ಉಳ್ಳವರ ಖಾಸಗಿ ಬಂಡವಾಳವನ್ನಾಗಿ ಮಾರ್ಪಡಿಸುವ ಹುನ್ನಾರವನ್ನು ತಡೆಗಟ್ಟಲು ಸಾಕಷ್ಟು ರಕ್ಷಣಾ ನಿಯಂತ್ರಣಗಳು ಚಾಲ್ತಿಯಲ್ಲಿವೆ ಎಂಬುದನ್ನು ಕಡತವು ವಿಶದಪಡಿಸಿದ್ದರೆ ಚೆನ್ನಾಗಿರುತ್ತಿತ್ತು. ಈ ರೀತಿಯ ಸ್ಪಂದನೆಯು ಕಡತದಲ್ಲಿ ಕಾಣೆಯಾಗಿರುವುದು ನಿಜಕ್ಕೂ ಆತಂಕಕ್ಕೆ ಎಡೆಮಾಡುವ ಸಂಗತಿ.

ವಿದ್ಯಾರ್ಥಿಗಳಿಗೆ ನೀಡುವ ಸಾಲಗಳು ಇಂದು ಗಳಿಸಿರುವ ಜನಪ್ರಿಯತೆಯು ಶಿಕ್ಷಣಕ್ಷೇತ್ರವು ಹೆಚ್ಚೆಚ್ಚು ಖಾಸಗೀಕರಣಗೊಳ್ಳುತ್ತಿರುವುದರ ಅಭಿವ್ಯಕ್ತಿಯಾಗಿದೆ. ಇದರಿಂದ ಹೊಮ್ಮುವ ತೊಂದರೆಗಳು ಸುವ್ಯಕ್ತ: ಏಕೆಂದರೆ, ಯಾವುದು ಮಾರುಕಟ್ಟೆ ಚಟುವಟಿಕೆಯಾಗಬಾರದಿತ್ತೋ ಅದನ್ನು ಸಾಲಗಳು ಮಾರುಕಟ್ಟೆ ಪ್ರಕ್ರಿಯೆಯೊಳಕ್ಕೆ ಸೆಳೆದಂತಾಗುತ್ತದೆ. ಶಿಕ್ಷಣವನ್ನು ನೈತಿಕ ಆಯ್ಕೆಗಳು ಮುನ್ನಡೆಸಬೇಕೋ ಅಥವಾ ಅತ್ಯಂತ ಹೆಚ್ಚಿನ ಸಂಬಳದ ಆಮಿಷವು ಮುನ್ನಡೆಸಬೇಕೋ ಎಂದು ನಮ್ಮನ್ನೇ ಕೇಳಿಕೊಂಡಾಗ ನಮ್ಮ ಅಪೇಕ್ಷೆ ಏನಿದೆ ಎಂಬುದೇ ಈ ಎಲ್ಲದರ ತಿರುಳಾಗಿದೆ. ಎಲ್ಲ ರೀತಿಯ ಶಿಕ್ಷಣಕ್ಕೂ ನಾವು ಅತಿಹೆಚ್ಚಿನ ಶುಲ್ಕವನ್ನು ಆಗ್ರಹಿಸಹೊರಟರೆ ಯಾವ ವೃತ್ತಿಗಳನ್ನು ಹಿಡಿದರೆ ಹಾಗು ಯಾವ ವಿಷಯಗಳನ್ನು ಕಲಿತರೆ ಹೆಚ್ಚಿನ ಹಣ ಹರಿದುಬರುತ್ತದೋ ಆ ವೃತ್ತಿಗಳು ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತವೆ; ಏಕೆಂದರೆ, ತಾವು ತೆರುವಷ್ಟನ್ನಾದರೂ ಮರಳಿ ಗಳಿಸುವುದು ಮಾನವಸಹಜ ಬಯಕೆಯೇ ಆಗಿರುತ್ತದೆ. ಆದರೆ, ಸಮಾಜಕ್ಕೆ ಅತಿಹೆಚ್ಚಿನ ಆದಾಯ ಸಲ್ಲಿಸುವ ವೃತ್ತಿಗಳಿವೆಯಾದರೂ, ಅವು ಹೆಚ್ಚಿನ ಸಂಬಳವನ್ನೇನೂ ಕೊಡಬೇಕೆಂದಿಲ್ಲ. ಉದಾಹರಣೆಗೆ, ವ್ಯಕ್ತಿಯೊಬ್ಬನಿಗೆ ನೀನು ವೈದ್ಯನಾಗಲು ಒಂದು ಕೋಟಿ ಸಂದಾಯ ಮಾಡಬೇಕೆಂದರೆ, ಆಗ ಅವನು ಆ ಹಣವನ್ನು ತನ್ನ ವೈದ್ಯಕೀಯ ವೃತ್ತಿಯ ಮೂಲಕ ಸಂಪಾದಿಸಲು ಹೊರಡುತ್ತಾನೆ. ಬಹಳಷ್ಟು ಮಂದಿ ಇದು ವೈದ್ಯರು ಮಾಡುವಂತಹ ಕೆಲಸವೆಂದು ಒಪ್ಪುವುದಿಲ್ಲ. ವೈದ್ಯರು ಕಡಿಮೆ ಖರ್ಚಿನಲ್ಲಿ ರೋಗಿಗಳ ಸೇವೆಯ ಬಗ್ಗೆ ಚಿಂತಿಸಬೇಕೆಂದು ಬಯಸುತ್ತೇವೆಯೇ ವಿನಹ ಅವರು ತಮ್ಮ ವೈದ್ಯಕೀಯ ಶಿಕ್ಷಣಕ್ಕೆ ಸಂದಾಯವಾದ ಹಣವನ್ನು ಮರಳಿ ಗಳಿಸಲು ರೋಗಿಗಳಿಗೆ ಹೆಚ್ಚು ವೆಚ್ಚದ ಚಿಕಿತ್ಸೆಗಳನ್ನು ಶಿಫಾರಸು ಮಾಡಬೇಕೆಂದು ಬಯಸುವುದಿಲ್ಲವಷ್ಟೇ.

ಅಮೆರಿಕಾದ ಕಂಪೆನಿಗಳಿಗೆ ಸಾಫ್ಟ್ವೇರ್ ಬರೆಯುವ ತರಬೇತಿಗಾಗಿ ಬರುವ ವಿದ್ಯಾರ್ಥಿಗಳಿಂದ ಹೆಚ್ಚು ಮೊತ್ತದ ಶುಲ್ಕಗಳನ್ನು

ಆಗ್ರಹಿಸುವುದು ಒಪ್ಪಬಹುದಾದ ಸಂಗತಿ. ಆಗ ಅದು ವಿದ್ಯಾರ್ಥಿಯ ಆಯ್ಕೆಗೂ, ಅಮೆರಿಕಾದ ಕಂಪೆನಿಗಳು ಅಂತಹ ವೃತ್ತಿಗಾರನನ್ನು ಕೆಲಸಕ್ಕಿಟ್ಟುಕೊಳ್ಳುವುದು ಲಾಭದಾಯಕವೋ, ಅಲ್ಲವೋ ಎಂಬ ವಿಚಾರಕ್ಕೆ ಬಿಟ್ಟಿದ್ದು. ಆದರೆ, ಶಿಕ್ಷಣವು ಸಮಾಜಕ್ಕೆ ಮರುಸಂದಾಯ ಮಾಡಬೇಕಾದ ಸಂದರ್ಭದಲ್ಲಿ ವಿದ್ಯೆಯ ಸಂಪಾದನೆಗಾಗಿ ಅತಿ ಹೆಚ್ಚಿನ ಶುಲ್ಕದ ಆಗ್ರಹವು ಆ ಶಿಕ್ಷಣವು ಕಾರಣವಾಗುವ ಸಾಮಾಜಿಕ ಸೌಲಭ್ಯಗಳ ಮೇಲೆ ಬೀರುವ ಪರಿಣಾಮಗಳ ಬಗ್ಗೆ ನಾವು ಜಾಗರೂಕರಾಗಿರಬೇಕಾಗುತ್ತದೆ. ಉದಾಹರಣೆಗೆ, ನಾವೇನಾದರೂ ಬಿ.ಎಡ್. ಕಾಲೇಜೊಂದನ್ನು ಮಾರುಕಟ್ಟೆ ಮಾದರಿಯಂತೆ ವಿದ್ಯಾರ್ಥಿಗಳಿಗೆ ಹೆಚ್ಚಿನ ಶುಲ್ಕ ವಿಧಿಸಿ ನಡೆಸಲು ಹಠ ತೊಟ್ಟರೆ, ಅಲ್ಲಿನ ಪದವೀಧರರು ಹೆಚ್ಚು ಸಂಬಳ ನೀಡುವ ಅತಿ ದುಬಾರಿ ಖಾಸಗಿ ಶಾಲೆಗಳಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ಹಾತೊರೆಯುವುದು ಸಹಜ. ಅವರು ಹೂಡಿಕೆಯನ್ನು ಮರಳಿ ಗಳಿಸುವುದರಲ್ಲಿ ತಪ್ಪೇನಿದೆ? ಆಗ, ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಪಾಠಮಾಡಲು ಉಳಿಯುವವರು ಯಾರು ಎಂಬ ಸಮಸ್ಯೆ ಎದುರಾಗುತ್ತದೆ.

ಇಂತಹ ಸಮಸ್ಯೆಗಳು ಶಿಕ್ಷಣವು ಸಾರ್ವಜನಿಕ ಹಿತಕ್ಕಾಗಿ ಇರಬೇಕು ಎಂಬ ಸಾರ್ವತ್ರಿಕ ವಾದವು ರೂಪುಗೊಳ್ಳುವಂತೆ ಮಾಡಿವೆ. ಶಿಕ್ಷಣವನ್ನು ಖಾಸಗಿ ವಸ್ತುವನ್ನಾಗಿಸುವುದಾಗಲೀ, ಅದನ್ನೊಂದು ಸರಕನ್ನಾಗಿಸುವುದಾಗಲೀ ಸಲ್ಲ. ಶಿಕ್ಷಣವು ಮಾರುಕಟ್ಟೆ ಪ್ರಕ್ರಿಯೆಗಳ ಅಂಗವಾಗಿ ಉಳಿದರೂ ಅತಿ ಹೆಚ್ಚಿನ ಸಾಮಾಜಿಕ ನ್ಯಾಯ ಹಾಗು ಕ್ಷೇಮವನ್ನು ಸಾಧಿಸಲು ಅದನ್ನು ನಿಯಂತ್ರಿಸುವ ವಿಧಾನವೇನು ಎಂಬುದರ ಬಗ್ಗೆ ವಾದಗಳನ್ನು ಮಂಡಿಸಲಾಗಿದೆ. ಒಳಸುರಿ ಕಡತವಾದರೋ ಈ ವಿಷಯವನ್ನು ನೇರವಾಗಿ ಪರಿಶೀಲಿಸುವುದಾಗಲೀ, ಅದಕ್ಕೆ ಸ್ಪಂದಿಸುವುದಾಗಲೀ ಕಾಣಬರುವುದಿಲ್ಲ ಎಂಬುದು ದುಃಖಕರ ಸಂಗತಿ. ವಿದ್ಯಾರ್ಥಿ ಸಾಲಗಳ ಬಗ್ಗೆ ಪು. ೪೦ರಲ್ಲಿ ಉಲ್ಲೇಖವಿದ್ದೂ, ನಾವು ಭಾರತೀಯ ಶಿಕ್ಷಣದ ಇನ್ನೂ ಅಧಿಕ ಸರಕೀಕರಣವನ್ನು (commodification) ಪ್ರೋತ್ಸಾಹಿಸಲು ಬಯಸುತ್ತೇವೆಯೇ, ಇಲ್ಲವೇ ಎಂಬ ಚರ್ಚೆಯನ್ನು ಕೈಬಿಟ್ಟಿದೆ. ಅಲ್ಲಿನ ಹೇಳಿಕೆಯಾದರೋ, ಇನ್ನು ಮುಂದೆ ಸಾಲಗಳನ್ನು ದುಬಾರಿಯಲ್ಲದ ಬಡ್ಡಿ ದರಗಳಲ್ಲಿ ಸುಲಭವಾಗಿ ದೊರೆಯುವಂತೆ ನೋಡಿಕೊಳ್ಳಲಾಗುತ್ತದೆ, ಎಂಬುದಷ್ಟೆ ಆಗಿದೆ. ಆದರೆ, ಮೊದಲನೆಯದಾಗಿ, ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಾಲ ನೀಡುವುದು ಹಿತಕರವೇ, ಅಲ್ಲವೇ ಎಂಬ ವಿಷಯವು ಚರ್ಚೆಗೆ ಒಳಪಟ್ಟೇ ಇಲ್ಲ.

ಮಾರುಕಟ್ಟೆಗಳ ಒಲವು ಸಹಜವಾಗಿ ಸಾಮಾಜಿಕ ಅಸಮತೋಲನವನ್ನು ಹೆಚ್ಚಿಸುವ ದಿಸೆಯಲ್ಲೇ ಇರುತ್ತದೆ ಎಂಬುದು ಅರ್ಥಶಾಸ್ತ್ರದ ಅತಿ ಸಾಮಾನ್ಯ ಪರಿಚಯ ನೀಡುವ ಪಠ್ಯಪುಸ್ತಕಗಳೂ ಅಂಗೀಕರಿಸುವ ಪ್ರಾಥಮಿಕ ತಥ್ಯ. ಒಳಸುರಿ ಕಡತವು ಈ ಸಮಸ್ಯೆಯನ್ನು ಉಲ್ಲೇಖಿಸಲು ಮರೆಯುತ್ತದೆ. ಶಿಕ್ಷಣವು ಮಾರುಕಟ್ಟೆ ಪ್ರಕ್ರಿಯೆಯ ಅಂಗವಾದರೆ ಬಲ್ಲಿದರು ಬಡವರಿಗಿಂತ ಸುಲಭವಾಗಿ ಖರೀದಿಸಲಾಗುವ ಸರಕಾಗಿ ಅದು ಮಾರ್ಪಾಡಾಗದು ಎಂಬುದನ್ನು ಖಾತ್ರಿಪಡಿಸುವುದಾದರೂ ಎಂತು? ಒಳಸುರಿ ಕಡತವಾದರೋ ಇದನ್ನು ಅರ್ಥಮಾಡಿಕೊಳ್ಳದಂತೆ ಇದೆ; ಇಲ್ಲವೇ, ಇದರ ಬಗ್ಗೆ ಯಾವುದೇ ನಿಲುವು ತಳೆದಂತೆ ಕಾಣುವುದಿಲ್ಲ. ಅಥವಾ, ಟೀಕಿಸದೇ ಇರುವುದೂ ನಿಜವಾಗಿ ಒಂದು ನಿಲುವೆ? ಊಹಿಸುವ ಅಧಿಕಾರ ಮಾತ್ರ ನಮಗೆ ಬಿಟ್ಟದ್ದು.

ಹೀಗಾಗಿ, ಇದರಲ್ಲಿ ವಿರುದ್ಧಾತ್ಮಕ ಧ್ವನಿಗಳ ತಾಕಲಾಟವಿದೆ. ಒಂದೆಡೆ, ಶಿಕ್ಷಣವು ಎಲ್ಲರಿಗೂ–ಕೌಟುಂಬಿಕ ಅಥವಾ ಸಾಮಾಜಿಕ ಹಿನ್ನೆಲೆ ಏನೇ ಇರಲಿ–ಲಭ್ಯವಿರಬೇಕು ಎಂಬ ಹೇಳಿಕೆ. ಮತ್ತೊಂದೆಡೆ, ಹೆಚ್ಚಬಹುದಾದ ಸಾಮಾಜಿಕ ಅಸಮಾನತೆಯ ಅಪಾಯದ ಬಗ್ಗೆ ಯಾವುದೇ ಚಿಂತನೆ ಇಲ್ಲದಂತಹ ಖಾಸಗೀಕರಣವನ್ನು ಕಾರ್ಯತಃ ಅಂಗೀಕರಿಸಲಾಗುತ್ತಿದೆ. ಶಿಕ್ಷಣವು ತರುವ ಸಾಂಸ್ಕೃತಿಕ, ರಾಜಕೀಯ ಹಾಗು ಸಾಮಾಜಿಕ ಲಾಭಗಳಿಗೆ ವಿಮುಖರಾಗಿ, ಅದು ತರುವ ಆರ್ಥಿಕ ಲಾಭಗಳಿಗಾಗಿ ಮಾತ್ರ ಬಯಸುವ ಸರಕಿನಂತಾದರೆ ಎದುರಾಗಬಹುದಾದ ಸಾಂಸ್ಕೃತಿಕ ವಿಕೃತಿಗಳ ಬಗ್ಗೆಯೂ ಯಾವುದೇ ಚರ್ಚೆ ಇಲ್ಲ.

ನೀತಿಯ ಒಳಸುರಿ ಕಡತವು ಈ ವಿಷಯವನ್ನು ನೇರವಾಗಿ ಎದುರಿಸಿದ್ದರೆ ಚೆನ್ನಾಗಿರುತ್ತಿತ್ತು. ದತ್ತಿ ಸಂಸ್ಥೆಗಳ ಹಾಗು ಖಾಸಗಿ ವ್ಯಕ್ತಿಗಳ ಚಟುವಟಿಕೆಗಳಿಗೆ ಸಾಮಾಜಿಕ ಅಸಮಾನತೆಯನ್ನು ಹೆಚ್ಚಿಸುವ, ಬಡವರ ಹೊಟ್ಟೆಗೆ ಹೊಡೆದು ಲಾಭ ಮಾಡುವ ಪ್ರವೃತ್ತಿಯಾಗಲೀ ಇಲ್ಲದಿರುವ ಸಂದರ್ಭದಲ್ಲಿ ಶಿಕ್ಷಣಕ್ಷೇತ್ರದಲ್ಲಿ ಅವರಿಗೆ ಭಾಗೀದಾರರಾಗಲು ಆಹ್ವಾನವಿದೆ ಎಂದಾದರೂ ಕಡತವು ವಿಶದಪಡಿಸಬಹುದಿತ್ತು. ಓರ್ವ ವ್ಯಕ್ತಿಯು ಬಡ ಕುಟುಂಬದಲ್ಲಾಗಲೀ, ಸಾಮಾಜಿಕವಾಗಿ ಹಿಂದುಳಿದ ಕುಟುಂಬದಲ್ಲಾಗಲೀ ಜನ್ಮ ತಳೆದಿದ್ದಾನೆಂಬ ಒಂದೇ ಕಾರಣಕ್ಕೆ ಅವನು ಅವಕಾಶಗಳಿಂದ ಹಾಗು ಗುಣಾತ್ಮಕ ಬೆಂಬಲದಿಂದ ವಂಚಿತನಾಗುವುದು ರಾಷ್ಟ್ರಕ್ಕೆ

ಸಮ್ಮತವಲ್ಲ ಎಂಬುದನ್ನಾದರೂ ಹೇಳಬಹುದಿತ್ತು. ಯಾವ ಕ್ಷೇತ್ರಗಳಲ್ಲಿ ಶಿಕ್ಷಣವು ಸಾಂಸ್ಕೃತಿಕ ಹಾಗು ನೈತಿಕ ಮೌಲ್ಯಗಳಿಂದ ಮಾರ್ಗದರ್ಶನ ಪಡೆದು ಮುನ್ನಡೆಯುವ ಅವಶ್ಯಕತೆಯಿದೆಯೋ ಅಂತಹ ಕ್ಷೇತ್ರಗಳಲ್ಲಿ ಲಾಭಮಾಡುವ ತರ್ಕವು ಚಾಲಕಶಕ್ತಿಯಾಗಲು ಆಸ್ಪದ ನೀಡುವುದಿಲ್ಲ ಎಂದು ಘೋಷಿಸಬಹುದಿತ್ತು. ಸದ್ಯಕ್ಕಂತೂ, ಒಳಸುರಿ ಕಡತವು ಈ ಸಂಗತಿಗಳನ್ನು ಸಂದಿಗ್ಧತೆಯ ವಾತಾವರಣದಲ್ಲಿ ಬಿಡುವುದರಿಂದ ಮುಂದೆ ಉಂಟಾಗಬಹುದಾದ ಅಪಾಯಗಳ ಬಗ್ಗೆ ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಂಡಂತಿಲ್ಲ.

**ಮುಕ್ತಾಯ**

ಹಾಗಾದರೆ ಅಂತಹ ಕಡತವನ್ನು ಪರಿಗಣಿಸುವುದಾದರೂ ಎಂತು? ಕೇವಲ ಒಂದು "ಸಾರಭೂತ" ಗುಣವನ್ನು ಗುರುತಿಸುವ ಅಪಾಯಗಳ ಬಗ್ಗೆ ಈಗಾಗಲೇ ಹೇಳಿದ್ದಾಗಿದೆ. ಪ್ರಸಕ್ತ ಒಳಸುರಿ ಕಡತವು, ಅದು ಸದ್ಯಕ್ಕೆ ಪ್ರಕಟವಾಗಿರುವ ಸ್ಥಿತಿಯಲ್ಲಿ, ಅನೇಕ ತೂಕದ ಹಾಗು ಶ್ಲಾಘನೀಯ ಶಿಫಾರಸುಗಳನ್ನು ಮಂಡಿಸಿರುವುದು ನಿಜ. ಆದರೂ, ಕೆಲವು ವಿಧಗಳಲ್ಲಿ ಅದು ತನ್ನನ್ನು ತಾನೇ ವಿರೋಧಿಸುವಂತೆಯೂ ಭಾಸವಾಗುತ್ತದೆ. ಅನೇಕ ಎಡೆಗಳಲ್ಲಿ ಕಡತದ ಭಾಷೆಯು ಬೇರೆ-ಬೇರೆ ಹಿತಾಸಕ್ತಿಗಳು ಅದರಿಂದ ಬೇರೆ-ಬೇರೆಯೇ ಆದ ಅರ್ಥಗಳನ್ನು ಹೊರಡಿಸಲು ಸಾಧ್ಯವಾಗುವಂತೆ ಇದೆ. ಕಡತದ ಲೇಖಕರಿಗೆ ತಾವು ಚರ್ಚೆಗೆ ಎತ್ತಿಕೊಳ್ಳುವ ಅನೇಕ ಕಾಳಜಿಗಳ ಸುತ್ತ ಇಂದು ನಡೆಯುತ್ತಿರುವ ಚರ್ಚೆಗಳ ಬಗ್ಗೆಯಾಗಲೀ, ಅಂತಾರಾಷ್ಟ್ರೀಯ ಅನುಭವಗಳ ಬಗ್ಗೆಯಾಗಲೀ ಅರಿವು ಇರುವಂತೆ ತೋರುವುದಿಲ್ಲ. ಸಂಶೋಧನೆ ಹಾಗು ಸಮಕಾಲೀನ ಅಂತಾರಾಷ್ಟ್ರೀಯ ಬೆಳವಣಿಗೆಗಳಿಂದ ಉತ್ತಮತರವಾಗಿ ತಿದ್ದಲ್ಪಟ್ಟಿದ್ದ ೧೯೮೬/೧೯೯೨ರ ರಾಷ್ಟ್ರೀಯ ಶಿಕ್ಷಣನೀತಿ ಅಥವಾ ಇನ್ನೂ ಹಳೆಯದಾದ ಮಾನನೀಯ ಕೊಠಾರಿ ಮಂಡಲಿಯ ವರದಿ ಮತ್ತು ಶಿಫಾರಸುಗಳೊಂದಿಗೆ ಇದನ್ನು ಹೋಲಿಸಿದಲ್ಲಿ, ಅವುಗಳ ಇನ್ನೂ ಗುಣಸಂಪನ್ನ ದೂರದೃಷ್ಟಿ ಹಾಗು ವಿಷಯಗಳನ್ನು ಅವು ಚರ್ಚೆಗೆ ಒಳಪಡಿಸುವ ವಿಧಾನಗಳ ಮುಂದೆ ಈ ಕಡತದ ಸಾಧನೆಯು ಅತೃಪ್ತಿದಾಯಕ ಎನಿಸದೇ ಇರದು. ದೇಶವನ್ನು ಆಳುವವರು ಪಾಂಡಿತ್ಯವನ್ನಾಗಲೀ, ವಿದ್ವತ್ತೆಯನ್ನಾಗಲೀ ನಂಬದೆ ಶಿಕ್ಷಣವನ್ನು ಆಡಳಿತಗಾರರ ಮೂಲಕ ನಡೆಸಲು ಬಯಸಿದರೆ ಏನಾಗಬಹುದು ಎಂಬ ಎಚ್ಚರಿಕೆಯ ಗಂಟೆಯನ್ನು ಮೊಳಗಿಸುವಂತಿದೆ ಇದು.

**ಅಮ್ಮನ್** ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾರೆ. ಅವರು ಸಾಮಾಜಿಕ ಅಸಮಾನತೆ ಹಾಗು ಗುರುತಿನ ರಾಜಕಾರಣದ ವಿಷಯಗಳಲ್ಲಿ ಆಸಕ್ತರಾಗಿದ್ದಾರೆ. ಏಕಲವ್ಯ, ದಿಗಂತರ್ ಹಾಗು ACCORD ಇವೇ ಮೊದಲಾದ ಸರ್ಕಾರೇತರ ಸಂಸ್ಥೆಗಳೊಂದಿಗೆ ತೊಡಗಿಸಿಕೊಂಡಿರುವ ಇವರನ್ನು amman.madan@apu.edu.in ಮೂಲಕ ಸಂಪರ್ಕಿಸಬಹುದಾಗಿದೆ.

ಅನುವಾದ: ಕುಶಾಲ್. ಬಿ.ಎಸ್

ಪರಿಶೀಲನೆ : ಚಂದ್ರಶೇಖರ್ ಮಂಡೆಕೋಲು